Azim Premji Foundation

Issue 82



BAYLU

Karnataka Field Institutes

...extending ourselves

June 2019



Core team

Ravi BT
Ravindra Jain
Ramakrishna bhat
Akkamahadevi
Gundappa Katekar
Ilyas Parvez
Shivaji
Showrish Kudkuli

Advisors

Umashankar Periodi
Shreekanth Sreedharan
Umesh pade
Rudresh S

Cover Page design

Malavika

Artwork on cover page

Muzammil
Rajani bhat

Editorial Team

Sunita Pattar
Shalini Dhage
Guru Moger

Contents

1. ಆಲದ ಮರದ ಕೆಳಗೆ — *ಅನುರಾಗ್ ಬೆಹರ್ (ಅನುವಾದ ರಾಮಕೃಷ್ಣ ಭಟ್)*

2. ಘನತೆಯ ಸ್ಫೂರ್ತಿ — *ಅನುರಾಗ್ ಬೆಹರ್ (ಅನುವಾದ ರಾಮಕೃಷ್ಣ ಭಟ್)*

3. **Under the banyan tree** — ***Anurag Behar***

4. Inspired by grace — ***Anurag Behar***

5. Kotreshi Kanasu – review of a Kannada movie on school education
Sreekanth Shreedharan, Bangalore
Benny, Bangalore
Shilpa, Bangalore

6. ಕಂಡದ್ದು, ಕಾಣದ್ದು, ಹಲುಬಿದ್ದು ಇತ್ಯಾದಿ — ರಾಘವೇಂದ್ರ ಹೇರ್ಳೆ ಜಿ., ಬೆಂಗಳೂರು

7. ನಲಿಕಲಿ ಎನ್ನುವ ಪರಿಕಲ್ಪನೆಯ ಕಂಪು — **Ravish G N**

8. Ramachandra Guha

9. ಹಿಪ್ಪೋಪೊಟಮಸ್

10. ಚೆನ್ನಾಗಿ ನಡೆದ ಒಂದು ದೊಡ್ಡ ಕೆಲಸ ಕರಡು ರಾಷ್ಟ್ರೀಯ ಶಿಕ್ಷಣ ನೀತಿ 2019
ಎಸ್ ಗಿರಿಧರ್, ಡೆಕ್ಕನ್ ಹೆರಾಲ್ಡ್, 10 ಜೂನ್, 2019

11. Nethravathi is drying up! — **Umashanker Periodi**

ಆಲದ ಮರದ ಕೆಳಗೆ

ಅನುರಾಗ್ ಬೆಹರ್

ಆ ದೊಡ್ಡ ಆಲದ ಮರ ಸೂರ್ಯನ ಬಿಸಿಲಿನಿಂದ ಅವರನ್ನು ಕಾಪಾಡುತ್ತಿತ್ತು. ಮಾರ್ಚ್ ಕೊನೆಯಲ್ಲಿ ಸೂರ್ಯ ಇನ್ನೂ ಸುಡುವುದಕ್ಕೆ ಸುರುಮಾಡಿರಲಿಲ್ಲ. ಆದರೆ ಬಯಲಿನಲ್ಲಿ ಅವನು ಖಾರವಾಗಿಯೆ ಇದ್ದ. ಆ ಇಬ್ಬರು ಪುಟ್ಟ ಹುಡುಗಿಯರು ಆಲದ ಮರದ ಬಿಳಲುಗಳನ್ನು ಹಿಡಿದು ತೂಗಿಕೊಳ್ಳುತ್ತಿದ್ದರು. ಹೆತ್ತವರು ದಿನದ ಸಂಪಾದನೆಗೆ ಹೊರಹೋದಾಗ ಮನೆಯಲ್ಲೆ ಉಳಿಯುವುದಕ್ಕೆ ಅವರು ಚಿಕ್ಕವರು. ಅವರ ಒಡಹುಟ್ಟಿದವರ ಜೊತೆ ಅವರು ಶಾಲೆಗೆ ಬಂದಿದ್ದರು. ಒಂದನೆ ತರಗತಿಯಲ್ಲಿ ಕೂರುವುದಕ್ಕು ಅವರು ಪುಟ್ಟವಿದ್ದರು. ಹಾಗಾಗಿ ಶಾಲೆಯ ಆವರಣದಲ್ಲಿ ಸ್ವಚ್ಛಂದವಾಗಿದ್ದರು. ನಾನು ಅವರನ್ನು ಎದುರಾದಾಗ ಅವರು ಆಲದ ಮರ ಬೆಳೆದ ಕಟ್ಟೆಯ ಮೇಲಿದ್ದರು. ಕಟ್ಟೆಯ ಒಂದು ಮೂಲೆಯಲ್ಲಿ ಗೋರಿಯಿತ್ತು. ಶಾಲೆಯ ಆವರಣದ ಪಶ್ಚಿಮ ಪ್ರವೇಶದ್ವಾರದ ಪಕ್ಕವೆ ಆ ಕಟ್ಟೆಯಿತ್ತು.

ಲಕ್ಷ್ಮಿ ಮತ್ತು ಮೇರಿ ಜೀಕುತ್ತಲೆ ನನ್ನ ಜೊತೆ ಸಂಭಾಷಿಸಿದರು. ಒಬ್ಬರ ಹಿಂದೆ ಒಬ್ಬರಂತೆ ನನ್ನ ಕಡೆ ಪ್ರಶ್ನೆಗಳನ್ನು ಎಸೆದರು. ತಮ್ಮ ಬಿಳಲುಗಳಿಗೆ ಆತುಕೊಂಡಿದ್ದ ಪುಟಾಣಿಗಳು ನನ್ನ ಕಣ್ಣಿನ ಮಟ್ಟಕ್ಕೆ ಇದ್ದರು. ನಾನು ಶಿಕ್ಷಕನಲ್ಲ ಎಂಬುದು ಖಚಿತವಾದಂತೆ ಅವರಂತೆ ಜೀಕುವಂತೆ ಮತ್ತು ಅವರನ್ನು ಸೋಲಿಸುವಂತೆ ನನಗೆ ಸವಾಲೆಸೆದರು.

ನಾನು ಆಲದ ಕಟ್ಟೆಯನ್ನು ಹತ್ತತೊಡಗಿದಂತೆ ಅವರು ಕೂಗಿ ಹೇಳಿದರು, 'ಬಾಬಾನ ಮನೆಯಿದೆ, ಬೂಟು ಕಳಚಿಟ್ಟು ಬನ್ನಿ'. ನಾನು ಶೂ ಪೀಕಿಸಿದೆ, ಮೇಲಕ್ಕೆ ಹತ್ತಿದೆ, ಅವರೊಂದಿಗೆ ಕೆಲವು ನಿಮಿಷ ಆಟವಾಡಿದೆ. ಆಮೇಲೆ ಹೊರಡುವುದಕ್ಕೆ ತಯಾರಾದೆ. ಅವರು ಕೇಳಿದರು ನಾನು ಬಾಯಾರಿ ಹೊರಟೆನೆ ಎಂದು. ಹೆಡ್‌ಮಾಸ್ಟ್ರು ನನಗಾಗಿ ಕಾಯುತ್ತಿದ್ದಾರೆ ಎಂದೆ. ಅವರು ಒಂದೆ ಗಂಟಲಲ್ಲಿ, ಅವರು 'ಒಳ್ಳೆ ಸರ್' ಎಂದು ಕೂಗಿ ಹೇಳಿದರು.

ನಾನು ಭೇಟಿಕೊಟ್ಟ ಇನ್ನೊಂದು ಶಾಲೆಯಲ್ಲಿ, 6ನೇ ತರಗತಿಯ ವಿದ್ಯಾರ್ಥಿಗಳು ನನ್ನನ್ನು ಬಹಳ ಸುಲಭವಾಗಿ ಭೂಮಿಗಿಳಿಸಿದರು. ನನ್ನನ್ನು ಕೆಣಕುವುದರಲ್ಲಿ ಒಂದು ಮಗುವೂ ಬಾಕಿ ಉಳಿಯಲಿಲ್ಲ. ಅವರು ನನ್ನ ಹೆಸರು ಕೇಳಿದಾಗ, 'ಮೋಹನದಾಸ ಕರಮಚಂದ ಗಾಂಧಿ' ಎಂದೆ. ಬಹಳ ಮಕ್ಕಳು ಮಹಾತ್ಮ ಗಾಂಧಿ ತೀರಿಕೊಂಡಾಗಿದೆ ಎಂದು ಕೂಗಿಕೊಂಡರು. ಆಗ ನಾನು, 'ನರೇಂದ್ರ ಮೋದಿ' ಎಂದೆ. ಅವರು ಉರುಳಾಡುವಂತೆ ಹೊಟ್ಟೆ ತುಂಬ ನಕ್ಕರು. ನಾನು ಅವರಿಗೆ ಸವಾಲು ಹಾಕುವಂತೆ ಕೇಳಿದೆ, 'ನಾನು ಪ್ರಧಾನ ಮಂತ್ರಿ ಅಲ್ಲ ಎಂದು ಯಾಕೆ ಭಾವಿಸುತ್ತೀರಿ?' ಹೀಗೆ ಮಾತುಕತೆ ಮುಂದೆ ಹೋಯಿತು.

ಒಂದು ಮಗು ಕೇಳಿತು, 'ನೀವು ಮುಸಲ್ಮಾನರೆ?' ಇತರರು ನಾನು ಮುಸಲ್ಮಾನ ಹೌದಾ ಎಂದು ಅದೆ ಪ್ರಶ್ನೆಯನ್ನು ಮತ್ತೆ ಕೇಳಿದರು. ಅದು ಹೇಗೆ ನಿಮಗೆ ಗೊತ್ತಾಗುತ್ತದೆ ಕೇಳಿದೆ. ಅವರು ನನ್ನ ಗಲ್ಲದ ಕಡೆ ಕೈಮಾಡಿ, ನಿಮ್ಮ ದಾಡಿ ಅದನ್ನು ಹೇಳುತ್ತದೆ ಅಂದರು. ನಾನು ಮುಸಲ್ಮಾನ ಹೌದು ಅನ್ನುತ್ತಲೆ ನಮ್ಮ ತಮಾಷೆಯ ಹರಟೆ ಸ್ತಬ್ದವಾಯಿತು. ಅವರ ಕಣ್ಣುಗಳಲ್ಲಿ ಕೌತುಕ ಮನೆಮಾಡಿತು. ಅವರಲ್ಲೊಬ್ಬರು ಕೂಗಿದರು, 'ಇಲ್ಲ ನೀವು ಮುಸಲ್ಮಾನ ಅಲ್ಲ'. ಅವನ ಕೂಗು ತರಗತಿಮ ಕೋಣೆಯೊಳಗೆ ಅನುರಣಿಸಿತು. ಅವರು ಅಂತ ತೀರ್ಮಾನಕ್ಕೆ ಹೇಗೆ ಬಂದರು? ತಡವಿಲ್ಲದಂತೆ ಅವರು ಉತ್ತರಿಸಿದರು, 'ಯಾಕೆ ಅಂದರೆ ನೀವು ಒಳ್ಳೆಯವರಿದ್ದೀರಿ'.

ದೊಡ್ಡ ಆಲದ ಮರವಿದ್ದ ಶಾಲೆಯಲ್ಲಿ, 8ನೇ ತರಗತಿಯ ಹಿಂದಿನ ಸಾಲಿನಲ್ಲಿ ನಾನು ಕೂತೆ. ಕೆಲವು ತಿಂಗಳ ಹಿಂದೆ ನಡೆದ ಚುನಾವಣೆ ಕುರಿತು ಅವರ ಚರ್ಚೆಯಿತ್ತು. ಚರ್ಚೆ ರಾಜಕೀಯದ ಬಗೆಗಲ್ಲ, ಚುನಾವಣಾ ಪ್ರಕ್ರಿಯೆ ಕುರಿತು. ಕೆಲವು ಮತಕ್ಷೇತ್ರಗಳು ಮೀಸಲಿದ್ದುದರ ಕುರಿತು ಭಿನ್ನಾಭಿಪ್ರಾಯವಿತ್ತು. ಆ ತರಗತಿಯಲ್ಲಿದ್ದ ಶಿಕ್ಷಕರು ಒಂದು ಸಲ ಮಧ್ಯೆ ಬಂದು, ನಂತರ ಹಿಂದೆ ಸರಿದರು. ವಿದ್ಯಾರ್ಥಿಗಳ ನಡುವಿನ ಮಾತು ಮುಕ್ತವಾಗಿ ನಡೆಯುವುದಕ್ಕೆ ಅನುವು ಮಾಡಿದರು. ಸ್ವಲ್ಪ ಸಮಯದ ನಂತರ ವಿದ್ಯಾರ್ಥಿಗಳೊಂದಿಗೆ ಸಂಭಾಷಿಸುವುದಕ್ಕೆ ಅವರು ನನ್ನನ್ನು ಆಹ್ವಾನಿಸಿದರು.

ಪ್ರಜಾಪ್ರಭುತ್ವದ ಮುಖ್ಯ ಬಿಂದು ಏನು ಕೇಳಿದಾಗ, ಜೀವಿಸುವುದಕ್ಕೆ ಮತ್ತು ಆಡಳಿತಮಾಡುವುದಕ್ಕೆ ಅದು ಅತ್ಯುತ್ತಮ ವಿಧಾನ ಎಂದರು. ಯಾಕೆ ಕೇಳಿದೆ. ಯಾಕೆಂದರೆ ನಾವೆಲ್ಲ ಸಮಾನರು ಎಂದರು. ನಾವು ನಿಜಕ್ಕು ಸಮಾನರೆ ಕೇಳೀದೆ. ಹೌದು, ನಾವು ಸಮಾನರಿದ್ದೇವೆ, ನಾವೆಲ್ಲರು ಮನುಷ್ಯ ಜೀವಿಗಳು, ಮನುಷ್ಯರಾಗಿ ನಾವೆಲ್ಲ ಸಮಾನವಾಗಿದ್ದೇವೆ. ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಇಂದು ನಾವು ಸಮಾನರಿಲ್ಲ. ಆದರೆ ಪ್ರಜಾತಂತ್ರ ನಮ್ಮನ್ನು ಅಲ್ಲಿಗೆ ಕರೆದೊಯ್ಯುತ್ತದೆ. ಉದಾಹರಣೆಗೆ, 'ಮೀಸಲು ಚುನಾವಣಾ ಕ್ಷೇತ್ರಗಳು ಅಂತ ಸಮಾನತೆಯನ್ನು ಗಳಿಸುವುದಕ್ಕೆ ಇರುವ ಒಂದು ದಾರಿ. ವಾಸ್ತವ ಎಂದರೆ, ಪ್ರಜಾಪ್ರಭುತ್ವ ಆ ಕಡೆಗಿನ ಅತ್ಯುತ್ತಮ ದಾರಿ ಅಂತಲ್ಲ, ಆದರೆ ಅದೊಂದೆ ದಾರಿ ಅನ್ನುವುದು ವಾಸ್ತವ.'

ನಾನು ಮತ್ತೆ ಅವರ ಪ್ರತಿಕ್ರಿಯೆಗೆ ಒತ್ತಾಯಿಸಿದೆ, ನಾವು ಯಾಕೆ ಸಮಾನರು? ಆ ಪ್ರಶ್ನೆ ವಿದ್ಯಾರ್ಥಿಗಳ ಮಧ್ಯೆ ಐದು ನಿಮಿಷ ಕಾಲ ಸಮಾಲೋಚನೆಗೆ ಕಾರಣವಾಯಿತು. ಅವರ ಚರ್ಚೆ ಮುಕ್ತಾಯಕ್ಕೆ ಬಂದು ನನ್ನೆಡೆ ತಿರುಗಿ ಗಟ್ಟಿಯಾಗಿ ಹೇಳಿದರು, 'ಪ್ರತಿಯೊಬ್ಬರು ಅಂತಸ್ತವಾಗಿ ಒಳ್ಳೆಯವರಿದ್ದಾರೆ'.

'ಮುಸಲ್ಮಾನರೂ ಒಳ್ಳೆಯವರಿದ್ದಾರಲ್ಲ?' ಕೇಳಿದೆ. ಅವರು ಗಟ್ಟಿಯಾಗಿ ನಗಾಡಿದರು. ಯಾಕೆ ನಗಾಡುತ್ತೀರಿ ಕೇಳಿದೆ. ಯಾಕೆಂದರೆ ನನ್ನ ಪ್ರಶ್ನೆ ಹಾಸ್ಯಾಸ್ಪದವಾಗಿತ್ತು. ಇಂಚಿಂಚೂ. 'ಕಟ್ಟೆ ಮೇಲಿನ ಬಾಬಾ ಎಲ್ಲರಿಗಿಂತ ಉತ್ತಮರಿದ್ದರು. ಎಲ್ಲ ಮನುಷ್ಯರು ಒಳ್ಳೆಯವರಾಗುತ್ತಾರೆ.' ಅದಾಗಿ ಶಾಲೆಯ ಸಂಸತ್ತಿನ ಬಗ್ಗೆ ಅವರು ಹೆಮ್ಮೆಯಿಂದ ಮಾತಾಡಿದರು. ಉತ್ಸುಕತೆಯಿಂದ ಜಾತಿ ಮತ್ತು ಲಿಂಗ ಸಮಾನತೆ ಬಗ್ಗೆ, ಆಲೋಚಿಸುತ್ತ ಮೂಢನಂಬಿಕೆಗಳ ಬಗ್ಗೆ. ನಾನು ಮತ್ತೊಂದು ಶಾಲೆಯೆಡೆ ಮುಂದುವರಿದೆ.

ಹೋದ ಪಾಕ್ಷಿಕದಲ್ಲಿ ನಾನು ಶಾಲೆಗಳು ಪ್ರಜಾಪ್ರಭುತ್ವದ ದೇಗುಲಗಳು ಎಂದು ಬರೆದಿದ್ದಾಗ ಎರಡು ಬಗೆಯ ಟೀಕೆ ಎದುರಿಸಿದೆ. ಮೊದಲಿಂದು, ಸಂವಿಧಾನ ವಿರೋಧಿ ಮೌಲ್ಯಗಳನ್ನು ತೋರುವ ಬಹಳ ಮಂದಿ ಉನ್ನತ ಶಿಕ್ಷಣಹೊಂದಿದವರು. ಎರಡನೇದು, ದೇಗುಲ ಎಂಬ ಸಾಂಕೇತಿಕತೆ ಅಪಾಯದ್ದು. ಯಾಕೆಂದರೆ ಶಾಲೆಯ ಮಾತು ದೈವವಾಣಿ ಎಂಬಂತಾದೀತು. ಆಗ ಯಾವುದೆ ಬೌದ್ಧಿಕ ಚಿಂತನಾತ್ಮಕತೆಗಳೂ ಕ್ಷುಲ್ಲಕವೆನಿಸೀತು. ದೇಗುಲಗಳು ನಮ್ಮ ಸುಪ್ತ ಸಾಮರ್ಥ್ಯದ ಸಂಸ್ಥೆಗಳು. ಅವನ್ನು ಒತ್ತೆಯಿಡುವುದು ಅಸಾಧ್ಯ. ವಾಸ್ತವದಲ್ಲಿಯೂ ಅಸಾಧ್ಯ ಮತ್ತು ಸಾಂಕೇತಿಕವಾಗಿಯೂ ಅಸಾಧ್ಯ. ಇದಕ್ಕೆ ಇಲ್ಲಿಯ ಸ್ಥಳಾವಕಾಶವನ್ನು ಮೀರಿದ ಪ್ರತ್ಯೇಕವಾದ ವಿವರವಾದ ಪ್ರತಿಕ್ರಿಯೆಯ ಅಗತ್ಯವಿದೆ.

ಮೊದಲ ಟೀಕೆಗೆ ಕಾರಣ ನನ್ನ ಬರವಣಿಕೆಯ ಸಂಬಂಧಿಸಿದ ಭಾಗದ ತಪ್ಪು ಓದಿನಿಂದ, ಅಥವ ನಾನು ಸಾಕಷ್ಟು ಸ್ಪಷ್ಟವಾಗಿ ಬರೆಯದಿರುವುದರಿಂದ ಆಗಿದೆ. ಶಾಲೆಗಳು ಪ್ರಜಾಪ್ರಭುತ್ವದ ದೇಗುಲಗಳೆ ಆಗಬೇಕಿವೆ. ಆದರೆ ಬಹಳ ಕಮ್ಮಿ ಪ್ರಮಾಣದ ಶಾಲೆಗಳು ಆ ದಿಕ್ಕಿನಲ್ಲಿ ಪರಿಣಾಮಕಾರಿಯಾಗಿವೆ. ಬಹಳ ಶಾಲೆಗಳು ಅದರ ವಿರುದ್ಧದ ಚಿತ್ರಗಳಾಗಿವೆ. ಕೆಲವು ಉನ್ನತ ಶಿಕ್ಷಣವೇತ್ತರು ಅತಿಯಾಗಿಯೆ ಅಸಹನೆಯ ಮತಾಂಧರಾಗಿದ್ದಾರೆ. ಕೆಲವರು ತಮ್ಮ ಸ್ಥಿತಿಯ ಅರಿವಿಲ್ಲದೆ ಹಾಸ್ಯಾಸ್ಪದ ವ್ಯಕ್ತಿಗಳೂ ಆಗಿದ್ದಾರೆ. ತಮ್ಮ ಭೌತಿಕ ಯಶಸ್ಸಿನಲ್ಲಿ ಹೊರಳಾಡುತ್ತ ತಾವು ಶ್ರೇಷ್ಠ ನಾಗರೀಕರು ಎಂಬ ಹುಸಿ ನಂಬಿಕೆಯಲ್ಲಿ ಇದ್ದಾರೆ.

ಈ ಎರಡು ಪಂಗಡಗಳ ನಡುವಿನ ವೈರುದ್ಯವೆ ನಮ್ಮ ಶೈಕ್ಷಣಿಕ ವ್ಯವಸ್ಥೆಯ ಪ್ರಾತಿನಿಧಿಕ ಚಿತ್ರಣವೂ ಆಗಿದೆ. ನಮ್ಮ ಪ್ರತಿಯೊಂದು ಶಾಲೆಯೂ ಬಾಬಾನ ಗೋರಿಯಿರುವ ಶಾಲೆಯಂತೆ ಆಗಬೇಕು. ಶಿಕ್ಷಣ ಮತ್ತು ಶೈಕ್ಷಣಿಕ ಸಂಸ್ಥೆಗಳು ಮಾತ್ರವೆ ಒಂದು ಚೇತೋಹಾರಿ ಪ್ರಜಾತಾಂತ್ರಿಕತೆಯನ್ನು ಬೆಳೆಸುವ ಹೊಣೆ ಹೊರಲಾಗದು. ಆದರೆ ಅವುಗಳ ಪಾತ್ರ ಮಹತ್ವದ್ದಾಗಿದೆ.

ಆ ಎರಡು ಪುಟ್ಟು ಮಕ್ಕಳು ನಾನು ಹೊರಡುವಾಗ ಆಲದ ಮರದ ಕಟ್ಟೆಯ ಮೇಲೆ ಅಂಗಾತ ಮಲಗಿದ್ದರು. 'ಬಾಬಾನಿಗೆ ನಮಸ್ಕರಿಸಿ ಹೋಗಿ' ಎಂದು ನನಗೆ ಆಜ್ಞಾಪಿಸಿದರು. ನಾನು ಶಿರಸಾವಹಿಸಿದೆ. ಅದಾಗಿ ನಾನು ಹೊರಟೆ. ಲಕ್ಷ್ಮಿ, ಮೇರಿ ಮತ್ತು ದೊಡ್ಡ ಆಲದ ಮರದ ಕೆಳಗಿನ ಕಟ್ಟೆ – ಭಾರತದ ಪ್ರಜಾತಾಂತ್ರಿಕತೆಯ ರಾಷ್ಟ್ರೀಯ ವೃಕ್ಷ – ಪ್ರಜಾಪ್ರಭುತ್ವದ ನಿಜವಾದ ಆಲಯವೆ ಆಗಿದೆ.

ಅನುವಾದ: ರಾಮಕೃಷ್ಣ

****

ಘನತೆಯ ಸ್ಫೂರ್ತಿ

ಅನುರಾಗ್ ಬೆಹರ್

ಮೇರಿ ಮತ್ತು ಲಕ್ಷ್ಮಿ ಎಂಬ ಎರಡು ಪುಟ್ಟ ಮಕ್ಕಳು ಮತ್ತು ದೊಡ್ಡ ಆಲದ ಮರದ ನೆರಳಿನ ಗೋರಿಕಟ್ಟೆ. ಎರಡು ವಾರಗಳ ಹಿಂದಿನ ನನ್ನ ಅಂಕಣದ ಆ ಚಿತ್ರಣ ವಿವರಗಳಿಂದ ಕೂಡಿ ಕೆಲವರಿಗೆ ಎಷ್ಟು ಪರಿಪೂರ್ಣ ಕಂಡಿತ್ತು ಎಂದರೆ ಅವರು ನನ್ನನ್ನು ಅದು ನಿಜಕ್ಕು ವಾಸ್ತವವೆ ಇಲ್ಲ ನನ್ನ ಮನಸ್ಸಿನ ನಿರ್ಮಿತಿಯೆ, ಎಂದು ಪ್ರಶ್ನಿಸಿದರು. ಕೊನೆ ಪಕ್ಷ ಆ ಹೆಸರುಗಳು? ಇನ್ನೂ ಹಲವರು ಬೇರೊಂದು ಪ್ರಶ್ನೆ ಎತ್ತಿದರು, ನೀವು ಅಷ್ಟೊಂದು ಆಳದ ಬೇಧಭಾವದ ಪ್ರಶ್ನೆಗಳಿಗೆ ಹೇಗೆ ಸ್ಪಂದಿಸುತ್ತೀರಿ? ಅವರು ಕೇಳುತ್ತಿದ್ದುದು ಶಾಲೆಯೊಂದರ ಮಕ್ಕಳು 'ನೀವು ಮುಸಲ್ಮಾನ ಇರಲಾರಿರಿ, ಯಾಕೆಂದರೆ ನೀವು ಒಳ್ಳೆ ಮನುಷ್ಯರಿದ್ದೀರಿ' ಎಂದು ಒತ್ತಿ ಹೇಳಿದ ಪ್ರಸಂಗದ ಬಗ್ಗೆ.

ದೇಶಾದ್ಯಂತ ಸಾವಿರಾರು ಶಾಲೆಗಳಲ್ಲಿ ಕೆಲಸಮಾಡುವಾಗ, ಒಮ್ಮೊಮ್ಮೆ ನಮಗೆ ಅಸಹನೀಯ ಕ್ರೌರ್ಯ ಎದುರಾಗುವುದು ಇದೆ. ಆದರೆ ನಾವು ಹೆಚ್ಚು ಸಲ ಅನುಭವಿಸುವುದು ಬೇಧಭಾವ ಮತ್ತು ಪೂರ್ವಾಗ್ರಹಗಳನ್ನು. ಪ್ರತ್ಯಕ್ಷ ಅಥವ ಪರೋಕ್ಷವಾಗಿ, ಮೆದುವಾಗಿ ಅಥವ ಕಠೋರವಾಗಿ, ಮೇಲ್ಪ್ಯೆಯಿಂದ ಅದು ಇಣುಕುವುದು ಕಾಣುತ್ತದೆ. ಅದು ಶಿಕ್ಷಕರಲ್ಲಿ ಇದೆ, ಶಾಲೆಯ ಸುತ್ತಮುತ್ತಲ ಸಮುದಾಯದಲ್ಲು ಇದೆ. ಅದೆ ರೀತಿ ಶಾಲೆಯ ಸಂಸ್ಕೃತಿಯಲ್ಲು ನೆಲೆಸಿರುವುದಿದೆ. ಅದು ಮಕ್ಕಳನ್ನು ಸೋಕಿ ಪೀಡಿಸುವುದಿದೆ. ಭಾರತೀಯ ಸಮಾಜದ ಹುಳುಕು ಹುಣ್ಣು ಬೆತ್ತಲೆ ನಿಂತಿದೆ – ಜಾತಿ, ವರ್ಗ, ಲಿಂಗ ತಾರತಮ್ಯ ಮತ್ತು ಹುಸಿ ಮತೀಯತೆ.

ಈಗ ನಾವೇನು ಮಾಡುವುದು?

ಮೊದಲಿಗೆ, ನಾವು ಈ ಸಂಗತಿಯನ್ನು ನಮ್ಮ ಕೆಲಸದ ಕೇಂದ್ರಭಾಗವಾಗಿ ಮಾಡಿಕೊಳ್ಳಬೇಕು. ಶಿಕ್ಷಣದ ಗುರಿ ನ್ಯಾಯಯುತ, ಸಮಾನ ಮತ್ತು ಮಾನವೀಯ ಸಮಾಜದ ಸ್ಥಾಪನೆ, ಮತ್ತು ಚೇತೋಹಾರಿಯಾದ ಪ್ರಜಾತಾಂತ್ರಿಕತೆಯ ಸ್ಥಾಪನೆ. ಈ ಗುರಿಗಳ ಸಾಧನೆಗೆ, ಶಾಲೆಗಳಲ್ಲಿ ಭಾರತೀಯ ಸಮಾಜದ ವಿಚ್ಛಿದ್ರಗಳು ಮಾಯಬೇಕು, ಕಂದರಗಳು ಮುಚ್ಚಿಕೊಳ್ಳಬೇಕು, ಪೀಡೆಗಳು ತೊಲಗಿ ಗುಣವಾಗಬೇಕು. ಶಾಲೆಗಳು ಅಂತ ಆಶಯದ ಸಮಾಜ ನಿರ್ಮಾಣಕ್ಕೆ ಮಹತ್ವದ ಪಾತ್ರ ವಹಿಸಬಲ್ಲವು. ನಮ್ಮ ಕೆಲಸ ಶಿಕ್ಷಣ ಕ್ಷೇತ್ರದಲ್ಲಿ ಎಂದಾದರೆ, ಸಾಂವಿಧಾನಿಕ ಮೌಲ್ಯಗಳ ಸ್ಥಾಪನೆ ಅದರ ತಿರುಳು. ಶಿಕ್ಷಣ ಕ್ಷೇತ್ರದಲ್ಲಿ ಕೆಲಸಮಾಡುವ ಬಹುಪಾಲು ವ್ಯಕ್ತಿಗಳು ಮತ್ತು ಸಂಸ್ಥೆಗಳು ಸಂಕುಚಿತವಾಗಿ 'ಕಲಿಕಾ ಮಟ್ಟ'ದ ಬಗೆಗಷ್ಟೆ ಗುರಿ ಇರಿಸಿದ್ದಾರೆ. ಅವರಿಗೆ ಶಿಕ್ಷಣ ಎಂಬುದು ಭಾಷೆ, ಗಣಿತ ಮತ್ತು ಇತರೆ ವಿಷಯಗಳ ಕಲಿಕೆ ಮಾತ್ರ. ಯಾವುದೆ ಅನುಮಾನವಿಲ್ಲದೆ ಅವೆಲ್ಲವು ಮಹತ್ವದವೆ. ಆದರೆ ಅದರ ಪೌರ, ಸಾಮಾಜಿಕ ಮತ್ತು ಮಾನವೀಯ ಗುರಿಗಳನ್ನು ಅಲಕ್ಷಿಸಿದರೆ, ಸಮಾಜದ ಪ್ರಗತಿಯೆಡೆಗಿನ ಬಲುಮುಖ್ಯ ದಾರಿಯನ್ನು ತೊರೆದಂತೆಯೆ ಸರಿ.
ಎರಡನೆಯದಾಗಿ, ಈ ಕೇಂದ್ರ ವಿಷಯದ ಮೇಲೆ ಕೆಲಸಮಾಡುವುದಕ್ಕೆ ಶಿಕ್ಷಣ ಎಲ್ಲಿ ನಡೆಯುವುದೊ ಅಲ್ಲಿ ನಾವಿರಬೇಕು. ನಾವು ಮಾತಾಡುವ ಗುಣಪಡಿಸುವ ಕಾರ್ಯ ಸಾಧ್ಯವಾಗುವುದು ಶಿಕ್ಷಕರಿಗೆ ಮಾತ್ರ. ಅದಕ್ಕೆ ಶಿಕ್ಷಕ ಸಮುದಾಯಗಳ ಜೊತೆ ಕೆಲಸಮಾಡಬೇಕು – ಅವರ ನಂಬಿಕೆ, ವರ್ತನೆ, ಮತ್ತು ದೃಷ್ಟಿಕೋನಗಳ ಜೊತೆ. ಇದು ಸಂಭವಿಸಬೇಕಾದರೆ ನಂಬಿಕೆಯ ಸಂಬಂಧಗಳನ್ನು ಬೆಳಸಬೇಕು. ಅಪರಿಚಿತರ ಜೊತೆ ಅಂತ ಅಂತರಾಳದ ಮಾತುಗಳನ್ನು ಆಡಲಾಗದು. ನಾವು ಕೆಲಸಮಾಡುವ ಸಮುದಾಯಗಳ ಅನನ್ಯ ಭಾಗವಾಗುವುದೊಂದೆ ಅವರ ಜೊತೆ ಸುಸ್ಥಿರವಾಗಿ ತೊಡಗಿಕೊಳ್ಳುವುದಕ್ಕಿರುವ ದಾರಿ. ಹಾಗಾಗಿಯೆ ನನ್ನ ಸಹೋದ್ಯೋಗಿಗಳು ಈ ದೇಶದ ವಿಸ್ತಾರದೊಳಗಿನ ಪುಟ್ಟ ಪಟ್ಟಣಗಳಲ್ಲಿ ಮತ್ತು ಹಳ್ಳಿಗಳಲ್ಲಿ ನೆಲೆಸಿದ್ದಾರೆ.

ಮೂರನೆಯದಾಗಿ, ನಮ್ಮ ತಂಡ ಈ ವಿಷಯಗಳ ಜೊತೆ ಸಮನ್ವಯ ಸಾಧಿಸಬೇಕು. ನಾವೆಲ್ಲ ಒಂದೆ ಸಮಾಜ ಮತ್ತು ಸಮುದಾಯದವರು. ನಾವೂ ಕೆಲವು ಮಟ್ಟಿಗೆ ಪೂರ್ವಾಗ್ರಹದ ಸೋಂಕನ್ನು ಹೊತ್ತವರೆ. ನಮ್ಮೊಳಗೆ ಕಾರ್ಯಸಂಕೋಚ ಬಹಳವಿದೆ. ಹಾಗಾಗಿ, ಮೌಲ್ಯಗಳ ಜೊತೆ ಎದ್ದುಕಾಣುವ ಸಮನ್ವಯ ಮತ್ತು ಕ್ರಿಯೆಗೆ ಬೇಕಾದ ಬದ್ಧತೆ ಒಡಮೂಡುವುದಕ್ಕೆ ವ್ಯವಸ್ಥಿತ ಪ್ರಯತ್ನ ಬೇಕು. ಖಂಡಿತವಾಗಿಯು ಇಂತ ಕೆಲಸಗಳಿಗಾಗಿ ನಮ್ಮೊಂದಿಗೆ ಜೊತೆಯಾಗುವವರು ಇಂತ ಮೌಲ್ಯಗಳನ್ನು ಸ್ವಯಂ ಆಯ್ದುಕೊಳ್ಳುವವರು. ಆದರೆ ಅನುಭವ ಏನು ಸೂಚಿಸುವುದು ಎಂದರೆ ಈ ಅಂತಸ್ಥ ಭಾವ ಮುಖ್ಯವಿರುವಾಗಲು, ಅದು ನಿರಂತರ ಪುನರ್ ದೃಢೀಕರಣ ಮತ್ತು ಬೆಂಬಲಿಸುವಿಕೆಗಳನ್ನು ಬೇಡುತ್ತದೆ.

ನಾಲ್ಕನೆಯದಾಗಿ, ಈ ವಿಷಯಗಳನ್ನು ನಿರ್ವಹಿಸುವ ಸಾಮರ್ಥ್ಯ ತಂಡದೊಳಗಿರುವುದನ್ನು ಬೇಡುತ್ತದೆ. ಬೇಧಭಾವ ಮತ್ತು ಪೂರ್ವಾಗ್ರಹಗಳು ಎದುರಾದರೆ ನಾವು ಹೇಗೆ ಎದುರಿಸಬೇಕು? ಅಂತ ವಿಷಯಗಳಲ್ಲಿ ಯಾರೆ ಆದರು ಯಾವ ರೀತಿ ತೊಡಗಬೇಕು? ಅದರ ತಾತ್ವಿಕ ತಳಪಾಯವೇನು? ಅದನ್ನು ನಾವು ಹೇಗೆ ನಿಜವಾಗಿಸುತ್ತೇವೆ ಮತ್ತು ಸಂಬಂಧೀಕರಿಸುತ್ತೇವೆ? ಯಾರಾದರು ಯಾಕಾದರು ಬದಲಾಗಬೇಕು? ಇಲ್ಲಿ ಬೇಕಿರುವುದು ಸ್ಪಷ್ಟತೆ, ಆತ್ಮವಿಶ್ವಾಸ ಮತ್ತು ಜಿಗುಟುತನ.

ಐದನೆಯದಾಗಿ, ಯಾವಾಗ ಮತ್ತು ಹೇಗೆ ನಾವು ಈ ಕೆಲಸಮಾಡುತ್ತೇವೆ? 'ತಾರತಮ್ಯವನ್ನು ತೊಡೆದುಹಾಕುವ' ಗುರಿಹೊಂದಿದ ತರಬೇತಿ ಕಾರ್ಯಾಗಾರಗಳಿಂದ ಏನೂ ನಡೆಯದು. ದಿನನಿತ್ಯದ ಬದುಕಿನ ಸಂದರ್ಭಗಳಲ್ಲಿ ಸಂವಾದಗಳನ್ನು ನಡೆಸುವುದು ಬಹಳ ಪರಿಣಾಮ ಉಂಟುಮಾಡುತ್ತದೆ. ಉದಾಹರಣೆಗೆ, ಗಣಿತದ ಕಾರ್ಯಾಗಾರದಲ್ಲಿ, ಹುಡುಗಿಯರು ಗಣಿತ ಕಲಿಯಲಾರರು ಎಂದು ಒಬ್ಬ ಶಿಕ್ಷಕರು ಹೇಳವಾಗ, ಲಿಂಗ ತಾರತಮ್ಯದ ವಿಷಯವನ್ನು ಚರ್ಚಿಸುವ ಸಂದರ್ಭ ಉಂಟಾಗುತ್ತದೆ. ಶಾಲೆಯಲ್ಲಿ ಜಾತಿ ಆದ್ಯತೆಯ ಮೇಲೆ ಮಧ್ಯಾಹ್ನದ ಬಿಸಿಯೂಟ ಬಡಿಸುವ ರೂಢಿ ಕಂಡರೆ, ಆ ಸಂವೇದನಾರಾಹಿತ್ಯ ಕೆಡುಕನ್ನು ಪ್ರಶ್ನಿಸುವ ಅವಕಾಶ ಎದುರಾಗುತ್ತದೆ. ಕೆಲವು ಸಂದರ್ಭ ನೇರನೇರ ಚರ್ಚೆಗಿಳಿಯುವುದು ಸಾಧ್ಯವಾಗಬಹುದು. ಉದಾಹರಣೆಗೆ, ನಮ್ಮ ಸಂವಿಧಾನದ ಅರ್ಥವಂತಿಗೆ ಕುರಿತು ಸಂವಾದಿಸುವುದು. ಇತರೆ ವಿಧಾನಗಳು ಫಲಕೊಡದಿರುವಾಗ ರಂಗಭೂಮಿ, ಸಂಗೀತ, ಮತ್ತು ಸಾಹಿತ್ಯಗಳು ಪರಿಣಾಮಕಾರಿಯಾಗಿ ಪ್ರೇರೇಪಿಸುವ ಮತ್ತು ಪ್ರಶ್ನೆಗಳನ್ನು ಎತ್ತುವ ಸಾಧ್ಯತೆಗಳಿವೆ. ಆದರೆ ಯಾವುದಕ್ಕು ಸಿದ್ಧ ಮಾದರಿ ಎಂಬುದಿಲ್ಲ. ಮೂಲಭೂತ ವಿಷಯದ ಮೇಲೆ ಪ್ರತಿ ಸನ್ನಿವೇಶಕ್ಕು, ಪರಿಸ್ಥಿತಿಗು ಬೇಕಾಗುವ ವಿಧಾನ ಮತ್ತು ಕ್ರಮಗಳು ಹೊಸದಾಗಿಯೆ ರೂಪುಗೊಳ್ಳಬೇಕು. ತರತಮ ಮತ್ತು ಪೂರ್ವಾಗ್ರಹದ ಪ್ರತಿ ಸಂದರ್ಭವೂ ಚರ್ಚೆಯನ್ನು ಸುರುಹಚ್ಚುವ ಅವಕಾಶವಾಗಿಯೆ ನೋಡಲ್ಪಡಬೇಕು.

ಆರನೆಯದಾಗಿ, ಪೂರ್ವಾಗ್ರಹವನ್ನು ಎದುರಿಸುವುದಕ್ಕೆ ಧೈರ್ಯಬೇಕು. ನಾವು ವಾಸಿಸುವ ಸಮುದಾಯಗಳೊಳಗೆ ಆಳವಾಗಿ ಬೇರುಬಿಟ್ಟಿರುವ ನಂಬಿಕೆಗಳನ್ನು ಪ್ರಶ್ನಿಸುವುದು ಮತ್ತು ನಿರಂತರವಾಗಿ ಪ್ರಶ್ನಿಸುತ್ತಿರುವುದು ಬಲು ಕಷ್ಟ ನಿಜ. ಲಿಂಗ ಸಮಾನತೆಗೆ ವಾದಮಾಡುವುದು ಸುಲಭ, ಹಾಗಂತ ಅದು ಸರಳ ಸಮಸ್ಯೆ ಅಂದುಕೊಳ್ಳಬಾರದು. ಜಾತಿ ಮತ್ತು ಧರ್ಮಗಳು ಸಂಪೂರ್ಣ ಬೇರೆಬೇರೆಯಾದವು. ಎರಡೂ ನಮ್ಮೊಳಗಿನ ಪೈಶಾಚಿಕತೆಯನ್ನು ಹೇಯವಾಗಿ ಹೊರತರಬಲ್ಲವು. ದೃಢ ಮತ್ತು ನಿಶ್ಚಲವಾದ ಎದೆಗಾರಿಕೆ ನಮ್ಮನ್ನು ಮುಂದುವರೆಸುವುದಕ್ಕೆ ಬೇಕಿದೆ.

ಏಳನೆಯದಾಗಿ, ಬದಲಾವಣೆಗೆ ಅಗತ್ಯವಿರುವ ಚೈತನ್ಯ ಅನುಭೂತಿಯಿಂದ ಮಾತ್ರ ಬರಬಲ್ಲದು. ನಿಮ್ಮ ಎದುರಿರುವ ಮನುಷ್ಯ ಎಷ್ಟೆ ಮುಚ್ಚಿಕೊಂಡ ಸಂವೇದನಾಹೀನ ಧರ್ಮಾಂಧನಂತೆ ಕಾಣಬಹುದು, ಆದರೆ ಮುಂದುವರೆಯುವುದು ಸಾಧ್ಯವಾಗುವುದು ಸಂವಾದಗಳಿಂದ ಮಾತ್ರ. ಅಪ್ಪಟ ಸಂವಾದ ಸಾಧ್ಯವಾಗುವುದು ಪ್ರಾಮಾಣಿಕ ಅನುಭೂತಿಯಿಂದ ಮಾತ್ರ. ಬಹುಶ: ನಮಗೆ ಬೇಕಿರುವ ಸ್ಫೂರ್ತಿ ದೈವೀಕ ಘನತೆ ಮತ್ತು ದಯೆಯಿಂದ ಕೂಡಿದ ಚೈತನ್ಯದಲ್ಲಿದೆ. ಅನುಭೂತಿವಂತ ತೊಡಗಿಕೊಳ್ಳುವಿಕೆಯೊಂದೆ ಪ್ರಗತಿಗಿರುವ ದಾರಿ. ಹಾಗಿಲ್ಲವಾದರೆ ನೀವು ಎರಡು ಬಗೆಯ ಕುಣಿಕೆಗೆ ಸಿಕ್ಕಿಕೊಳ್ಳುವಿರಿ– ನಿಮ್ಮ ಮುಂದಿನ ವ್ಯಕ್ತಿಯನ್ನು ಕೀಳೈಸುವುದು, ಅಥವ, ಅವನಿಂದ ದೂರ ಓಡಿ ನಿಮ್ಮ ಸುಖದ ಗುಂಗೊಳಗೆ ಹುದುಗಿಕೊಳ್ಳುವುದು. ಎರಡೂ ಕ್ರಿಯಾಹೀನ ಸ್ಥಿತಿಗಳೆ ಆಗಿವೆ.

ಎಂಟನೆಯದು, ನಮ್ಮದೆ ಯೋಜನೆಯಿಲ್ಲದೆ ಕೆಲಸಮಾಡುವುದು. ಶಿಕ್ಷಕರು ಆಳ ಮಾನವೀಯ ಸೆಲೆಗಳ ಸರೋವರಗಳು, ಹಿಂಜರಿಯದ ಎದೆಗಾರಿಕೆಯವರು, ಮತ್ತು ಈ ಸಮಾಜದ ಬದಲಾವಣೆಗೆ ಬೇಕಾದ ಕಿಚ್ಚಿರುವವರು. ಅಂತವರು ಈ ದೇಶದ ಮೂಲೆಮೂಲೆಯಲ್ಲು ಹೇರಳವಾಗಿದ್ದಾರೆ. ಇದು ನಮ್ಮ ಭಾರತ ಎಂಬ ಕಾರಣಕ್ಕೆ ನಾವು ಒಟ್ಟಿಗೆ ಕೆಲಸಮಾಡುವುದು.

ನನಗೆ ಕೇಳಲಾದ ಮೊದಲ ಪ್ರಶ್ನೆಗೆ ಹಿಂದಿರುಗುತ್ತೇನೆ. ಆ ಆಲದ ಮರದ ಕೆಳಗಿನ ಚಿತ್ರ ನಾನು ಕಲ್ಪಿಸಿ ಬರೆದುದಲ್ಲ. ಅದರ ಪ್ರತಿ ವಿವರವೂ ನಿಜವಾಗಿದೆ. ಅದು ಈ ಭಾರತದಷ್ಟೆ ನಿಜವಾಗಿದೆ. ಭಾರತ ಅದನ್ನು ಆ ರೀತಿಯಾಗಿ ನಿರ್ಮಿಸಿದೆ.

ಅನುವಾದ: ರಾಮಕೃಷ್ಣ

****



Under the banyan tree

Anurag Behar

The great Banyan was shielding them from the sun. It wasn't yet blazing in late March, but it was hot out in the open. The two little girls were swinging and slipping from its dangling roots. Too young to be alone at home while their parents were out earning their daily wage, they had accompanied their siblings to school. They were also too young to be in class 1 and so, had a free run of the premises. When I encountered them, they had decided to occupy the *chabutra* over which the Banyan grew. There was a *mazaar* on one corner of the chabutra which itself was near the entrance at the western edge of the school quadrangle.

Lakshmi and Mary accosted me without interrupting their swinging, interrogating me in tandem. Clinging to the roots, they were at my eye level. Once they were satisfied that I was not a teacher, they challenged me to beat them at their game.

As I was climbing up the *chabutra*, they shouted together, "*Baba ka ghar hai, joote utaar ke aao*". I slipped off my shoes, climbed up and played with them for a few minutes, and then wanted to leave. They asked me whether I was leaving because I was thirsty. I said the head-teacher was waiting for me, and in unison they said he was a good "sir".

At another school I had visited earlier, students of class 6 sized me up within 20 minutes. No child was left out of the banter. When they asked me my name, I said, "Mohandas Gandhi". Many started shrieking that the Mahatma was dead. Then I said, "Narendra Modi" and they rolled over with laughter. I challenged them, "Why do you think I am not the Prime Minister?" And so, it went.

"*Aap Mussalman hain*?" one of the kids asked. Others repeated the question, asking me if I was Muslim. Why did they think I was, I asked, and they pointed at my chin, "*Aapki daadhi hai* ". My reply that I was indeed one, paused the banter, puzzlement visible on their faces. Then one of them shouted, "*Nahin aap Mussalman nahin ho!*", the assertion echoing around the class. How did they make that conclusion? The response was instantaneous, "*Kyunki aap achche aadmi ho*".

In the school with the great Banyan, I sat at the back of class 8. They were discussing elections held in the state a few months earlier, not the politics, but the electoral process. There was disagreement on the reason for some constituencies being reserved; the teacher intervened and then stepped back, letting the conversation flow. After a while, the teacher turned to me, and asked me to have a chat with the students.

What, I asked, is the point of democracy? It is the best way to live and govern. Why? Because we are all equal. Are we really equal? Yes, we are; we are all human beings and equally so. Socially and economically, we are not equal today, but democracy will get us there. For example, reserved constituencies are a way to achieve such equality. In fact, democracy is not the best way but the only way.

I pressed them, but why are we equal? That question led to a five-minute conference among the children. Once they concluded, they faced me and declared, "*Kyunki sab insaan andar se achche hote hain*".

'*Mussalman bhi achche hote hain*?' I asked. And they laughed loudly. Why are you laughing? Because it was a ridiculous question, totally ridiculous; "*Mazaar waale baba sabse achche thhe; sab insaan achche hote hain*". Then they spoke with pride about the school's parliament, animatedly about caste and gender equity, and thoughtfully about superstitions. I left for the next school.

Last fortnight when I wrote about schools being temples of democracy, I received two kinds of criticism. First, that many of those who embodied anti-constitutional values were highly educated. Second, that the metaphor of the temple was dangerous, since the word of the school could become gospel, undermining all critical faculties. Temples are among our most potent institutions and cannot be held hostage, neither as a metaphor by fears, nor in reality; but this deserves a detailed response.

The first criticism is a misreading of that piece (or perhaps it lacked clarity). Schools must be temples of democracy, but only a relatively small proportion today are effectively that. Many are the antithesis. No wonder that some of the most educated are the most bigoted. Many are also comically unaware of their own state, wallowing in material success with smug self-belief in their being paragon citizens.

The contrast between the two schools is representative of our education system. We need to make all our schools like the one with the *chabutra*. Education and its institutions cannot bear the entire burden of developing a vibrant democracy, but their role is significant.

The two little girls lay flat on the chabutra as I was leaving. "*Baba ko namaste kar ke jao*", they commanded, and I obeyed. And then I left. With Lakshmi, Mary and the *mazaar* under the great Banyan—the national tree of the republic of India—in a real temple of democracy. *

****



Inspired by grace

Anurag Behar

Two little girls named Mary and Lakshmi, and a *mazaar*, protected by a great Banyan tree. That tableau in my column two weeks ago seemed so perfect in all its detail to some that they asked me if I had made it up. Perhaps just the names? Many more asked another question—how do you respond to such deep prejudice? They were referring to children in a school asserting that "you cannot be a Muslim because you are a good man".

Working with thousands of schools across the country, occasionally we come face to face with intolerable cruelty. But we encounter discrimination and prejudice more frequently. Overt or covert, mild or harsh, it lurks just beneath the surface. It is there among teachers and the communities surrounding schools. Also, in the culture of schools, which infects children. Every fault line of Indian society lies bare—caste, class, gender and religion.

So, what do we do?

First, we recognize this matter as central to our work. The aim of education is to create a just, equitable and humane society, and a vibrant democracy. To fulfil these aims, the cleavages of Indian society must be healed, bridged and eliminated in schools, which then play a significant role in doing the same for society. If our work is in education, developing constitutional values is at its core. Too many individuals and organizations working in education focus narrowly on "learning levels". For them, education is about language, math and other subjects. All that is important, no doubt. But ignoring its civic, social and human aims deprives society of its most important pathway for progress.

Second, to work on this core, we must be where education happens. This healing can only be done by teachers, which demands work with communities of teachers—with their beliefs, behaviours and perspectives. This requires building relationships of trust. It's impossible to talk to strangers about such innermost feelings. Being an integral part of the communities that you work with is the only way for sustained engagement. Which is why my colleagues live in small towns and villages across this vast country.

Third, our team itself must have consonance on these matters. All of us are from the same society. We too carry the virus of prejudice, in some measure. Diffidence, even more. Therefore, explicit alignment with these values and a commitment to action requires systematic effort. Surely, those who join us to do this kind of work are self-selecting on these values. But experience suggests that while this innateness is important, it requires continuous reaffirmation and support.

Fourth, it requires capacity within our team to deal with these matters. What should we do upon encountering discrimination and prejudice? How does one engage on such matters? What are the philosophical underpinnings? How do we make it real and relatable? Why should anybody change at all? The requirement is of clarity, confidence and tenacity.

Fifth, when and how do we do this work? Training sessions targeted at “eliminating discrimination" have no chance of success. Integrating dialogue on these matters with daily life is far more effective. For example, in a math workshop, when a teacher says that girls just can’t learn math, an opportunity arises to confront gender biases. When in a school, children are fed the midday meal prioritized along caste lines, that is an opportunity to question this most intransigent of our cleavages. Occasionally it is possible to engage directly. For example, through developing an understanding of our Constitution. Theatre, music and literature are often very effective in animating and questioning what may not be touched upon by other methods. However, there really is no formula. Approaches and methods for each situation need to be devised, building on these basic blocks. And every instance of discrimination or prejudice must be seized as an opening.

Sixth, confronting prejudice requires courage. Challenging the deepest of beliefs within the communities that you live in and doing so persistently is very hard. Arguing for gender equity is relatively easier, though not necessarily any less complex. Caste and religion are a different matter altogether. These seem to bring out the worst demons of our nature; steadfast valour is needed.

Seventh, the energy for real change comes from empathy. However closed, senseless and bigoted the person in front of you may seem, progress happens only through dialogue. Sincere dialogue is possible only with genuine empathy. Perhaps we need inspiration from the theological notion of grace. Empathetic engagement is the only path to progress. Else you walk into one of the two traps—diminishing the person in front of you, or, fleeing from him into cliques of comfort. Both are completely dysfunctional.

Eighth, we do not work on our own. Teachers with the deepest reservoirs of humaneness, unflinching courage and fire to change this world abound in the nooks and corners of this country. We work together because this is our India.

Going back to the first question I was asked. I did not imagine that tableau under the Banyan tree. Every detail is real, as real as this India of ours that has made it so.

Anurag Behar



Kotreshi Kanasu – review of a Kannada movie on school education

Sreekanth Shreedharan, Bangalore

This review is prompted by the feeling of dissatisfaction at having said to a few colleagues after watching the movie, that despite it's apparent descriptive accuracy, the movie disappoints. This comment neither does full justice to what is good in the movie, nor clarifies the core issue, both of which are elaborated below.

Kottreshi Kanasu is a movie directed Na. Chandrasekhar based on a story by Kum. Veerabhadrappa. The story portrays Kotra, a Dalit boy doing well in securing a 1st Class in Grade 7 against all odds. He doesn't have any of the social and cultural capital to make this happen, as we can see in the impoverished hut, where he lives with no signs of any books, newspaper or magazines, his possibly illiterate parents and neighbours. He also works in the house of the local Gowda family, who seems to have an ambiguous relation to him. He works in their house for a small earning and they share both an inner core of affection and outer core of the maintenance of certain caste and social distinctions, like giving him coffee in a separate glass.

Of special note is that even if there is a discrimination at the village level, the school is as far it is shown, an equitable space, where all children sit with each other, and the school master is fair, competent and compassionate. He seems to remind of John Dewey's thoughts on how the school should create a space where the child can experience a democratic way of being, which may often not be available in the outside community. (The later portrayal of the master who is unable to not discriminate against Kotra even in his own house, only reinforces the value of the space the school provides even more)

At his success after Grade 7, his parents and community rejoice and dream of his going on to do well in later life and hopefully become an officer. In a dream sequence, the suite-booted Kotra returns to the village in a car, and the Gowda runs behind him with a garland. This is like the so-called Freudian dream, where the repressed desires find its fulfillment. However the expression of desire in overt celebrations, which culminate in the Gowda's house have an air of triumphalism to it. There are multiple jibes at other children including the Gowda's, who only got a 3rd class. This elicits tough retribution, where Kotra is thrown out of his work at the Gowda house and also severely physically harassed by another localite by being forced to smoke a cigarette.

Kotra doesn't yet fully grasp the sudden change in his situation, where he is not only harassed but also isolated by his school friends, as they are also cross with him for being ridiculed at their low performance. Kotra develops high anxiety of going to High School based on all this.

The subsequent part of the movie shows the parents and their desperate attempts to get him to agree and then have to deal with the aided school management in paying fees and overcoming various calculated roadblocks created to keep Kotra out. The situation is as hopeless as they are desperate. Eventually Kotra's father goes on a hunger strike, and the heightened tension causes a few of their community to show aggression to which the elite of the village respond by torching their huts!

Eventually different arms of the State intervene by design and by chance. The police exert some control over the village elites. Meanwhile an aide and mentor takes Kotra to Bangalore to meet various politicians and officials, in the end reaching none other than the Education Minister. Orders are sent

from "above" and now the local officials, school management and local elites have no option but to comply and eventually "Kotra Highschoolige Seriddu" which is also the name of the story based on which the film is made.

For a film, possibly based in the 70s or 80s and made in 1994, Kotreshi Kanasu shows a remarkable level of social commitment in choosing an important topic and doing justice to it in a certain sense. It tells a story that is as important as it is believable and through a host of likeable characters, it portrays the issue with poignancy. However every movie made on such a cause cannot also be an artistic or literary high-point and one needs to appreciate it for what it is, a genuine, well-intentioned movie, that is not easy to forget.

However the only crib is that, having brought the audience to the threshold of such an important issue a little more attention to certain aspects would have helped. The community of the protagonists' is painted in somewhat pastel shade of having no other dimension to life than getting Kotra to high School. Such selective attention doesn't bring out the different layers of their life. The jubilation of the community at Kotra's success is probably an accurate description of what may happen. And the power display that one finds there is certainly to be seen as a response to the way the relations are shaped by the local elite, where any discourse has to be on the basis of power and every ritual has to explicitly reinforce the hierarchy. However in painting only such a dialectic of power and counter-power, the movie misses out on the possibility of establishing a different discourse, which may not be a portrayal of what is journalistically possible, but of what is philosophically imaginable. After all is all great art to be mere representation? It is the absence of this that causes the movie to finally require the God's avatar, which in this case is in the form of a Vishnu Vardhan cameo and a gift right from the Education Minister.

This is why the movie, as much as it invites us to the threshold of the house of a normatively superior possibility, doesn't end up giving us the coffee in the cup of the household. Instead it disappoints us by serving us in the cup of mere power discourse. Lucky Kotra, but what of the 1000s of similar others?

Benny, Bangalore
This is my first ever attempt at writing about a movie. That too after just one viewing and a lousy one at that. I am not sure how relevant what I say to the purpose of the movie.

The review is a well-written analysis of the movie. What I like the most is the way the synopsis of the storyline presented. It, while giving a fair understanding of the theme and the development of the plot, also touches upon the larger social issues the movie attempts to portray (the neatly segregated lives of the social life of Kotra and his community as contrasted with that of the local elites) as well as some psychological aspects of some individual characters as well the not-so-easy-to-define relationship between some of the characters (the conflicting personality of the school master; the ambiguous relationship the Gowda family has with Kotra).

The review clearly states that every movie made on a cause as the Dalit's right to education cannot be an artistic or literary high-point and one needs to appreciate it for what it is, a genuine and well-intentioned movie, which is not easy to forget. However, it would have been better if the review also had mentioned, at least in passing, some of the aesthetically and artistically jarring aspects of the movie as well. Perhaps, the review is written basically from the point of view of the 'art for society's sake school' of aesthetics. Nevertheless, it may not be totally wrong to say that there's not much of extraordinary acting by any of the actors. Even an accomplished artiste like Dattatreya doesn't inspire much. Especially when one thinks of his later stellar performances in movies like 'Bettada Jeeva' and 'Mounie'. (Probably such performances were a later maturation of the actor in him.) The whole movie appears to be a plain story telling without leaving much to the imagination of the interpretation of the viewer. In other words, it seems that everything is 'said', where much should/could have been 'shown'.
It seems that at times, the director laboriously tries to fit in certain scenes to put across a social and political message, which seems to affect the organic flow of the story (One instance could be the scene where a man gets impressed by what Kottra tells his mother about the polluted water in the temple pond and handing him over a book with the picture of Ambedkar on its cover). If one remembers the frozen frame with which the Marathi movie Fundri (which also deals with a similar theme), one could think of the alternative possibilities of ending the movie in a more symbolic and open-ended way.

Having said all these, I do believe that the movie has to be appreciated for what it was trying to do almost three decades ago when the social and political awareness about the Dalit cause was not at a level as it is now. It is sure that if Na. Chandrashekhar were to make a movie today on the same theme, his treatment of it – both thematically and artistically – would be much more refined and sophisticated.

Shilpa, Bangalore
Another point that adds consistency to the Teacher's story is, when Kotra's friends are cross with him, all those scenes are outside the school. Of course, they had finished 7th and going to 8th, so holidays mostly.

Teacher's role has been portrayed idealistically. How, even being aware of holiness of the pond, how Kotra talks scientifically.
And even takes action during the baba scene and rescues Arjuna, his pet.
Could be the wave of "scientific thinking" during the times of when the movie was made.

ಕಂಡದ್ದು, ಕಾಣದ್ದು, ಹಲುಬಿದ್ದು ಇತ್ಯಾದಿ

ರಾಘವೇಂದ್ರ ಹೇರ್ಳೆ ಜಿ., ಬೆಂಗಳೂರು

ಹುಡುಕುತ್ತಿದ್ದೇನೆ ಒಂದಷ್ಟು ದಿನಗಳಿಂದ
ನಾನು ನನ್ನೊಳಗೆ, ನನ್ನಷ್ಟಕ್ಕೆ ಹೀಗೆ
ನನ್ನಂತೆಯೇ ಇರುವ ನೂರಾರು ಪ್ರತಿಬಿಂಬಗಳ ಸಮ್ಮುಖದಲ್ಲಿ
ತರಹೇವಾರಿ ಬಣ್ಣಗಳ ಕನ್ನಡಕ ಹರಡಿಕೊಂಡು
ಗಾಂಧಿಯನ್ನು; ಗಾಂಧಿಯ ತತ್ವಾದರ್ಶವನ್ನು; ಆಚರಣೆಯನ್ನು..

ಕಲಸಿ ಹೋದ ಗಾಢ ಮಿಶ್ರಿತ ಬಣ್ಣಗಳ ಕ್ಯಾನ್ವಾಸನ್ನು ಕಾಣುತ್ತೇನೆ,
ಕಣ್ಣು ಕೋರೈಸುವ ಬೆಳಕುಗಳ ಪ್ರತಿಫಲನ ಕಾಣುತ್ತೇನೆ,
ಅಸ್ಪಷ್ಟ ರೂಪಗಳ ಮುಖವಿಲ್ಲದ ವಿಕರಾಳ ಚಿತ್ರಗಳನ್ನು ಕಾಣುತ್ತೇನೆ,
ಅಗಣಿತ ಸದ್ದುಗಳ, ಕಿವಿಗಡಚಿಕ್ಕುವ ಚಪ್ಪಾಳೆಗಳ ಮೊರೆತವನ್ನು,
ಮುಗಿಲುಮುಟ್ಟುವ ಜಯಘೋಷವನ್ನು ಕೇಳುತ್ತೇನೆ,
ಎದೆಯುಬ್ಬಿಸಿ ನಡೆಯುವ ಠಾಕುಠೀಕಿನ ವೀರಾಧಿವೀರರ, ಧೀರೋದಾತ್ತ ನಾಯಕರ
ಆಟೋಪಗಳ, ಅಹಮ್ಮಿಕೆಯ ಪದರು ಪದರುಗಳ ಮಡಿಕೆ ಕಾಣುತ್ತೇನೆ,
ಅಲ್ಲಲ್ಲೆ ಅವರ ಬೆನ್ನ ಹಿಂದೆ ವಂಧಿಮಾಗಧರಂಥ ಚಪಲಚೆನ್ನಿಗರಾಯರನ್ನೂ ಕಂಡು ನಿಸೂರಾಗುತ್ತೇನೆ,
ಜಗದ ಜಂಜಡಕೆ ಬೆನ್ನುಹಾಕಿ
ಸುಖದ ಲೋಲುಪತೆಯ ಕೌದಿಯ ಹೊದ್ದ ಆತ್ಮರತಿಯ ಲೋಭಿಗಳನ್ನೂ ಕಾಣುತ್ತೇನೆ,
ಜಗದ ನಡುವೆ ನವೆಯುತ್ತ,
ನೊಣೆಯುತ್ತ
ಕನಸುಗಳ ಕಮರಿಸಿಕೊಂಡು ಅಜ್ಞಾತ ಬದುಕಿನ ಹಿಮಗಡ್ಡೆಗಳಲಿ ಹೂತು ಹೋಗಿ ಜೀವಂತ ಶವವಾದವರನ್ನೂ
ಕಾಣುತ್ತೇನೆ,
ರುದ್ರ ರಮಣೀಯ ದೃಶ್ಯಗಳನ್ನು,
ಸಿಹಿ, ಕಹಿ, ಒಗರು, ಖಾರದ ರುಚಿಗಳನ್ನು,
ಸುದ್ದಿಮಾಧ್ಯಮಗಳ ವಿಕ್ಷಿಪ್ತ ಲೋಕವನ್ನು,
ಸಾಮಾಜಿಕ ಜಾಲತಾಣಗಳ ಒಳಕೊವೆಗಳನ್ನು,
ಸೆಲ್ಯುಲಾಯ್ಡ್ ಲೋಕದ ಥಳುಕು ಬಳುಕನ್ನು,
ಗುಂಪುಗಾರಿಕೆ, ಬೂಟಾಟಿಕೆ, ವಿತಂಡವಾದ, ಅವಕಾಶವಾದಗಳ ಚಿತ್ರ–ವಿಚಿತ್ರ ಅವತಾರಗಳನ್ನು,
ವ್ಯಕ್ತಿಪೂಜೆ, ಕೋಮುಗಲಭೆ, ಹಿಂಸೆ–ಕ್ರೌರ್ಯಗಳ ವಿಜೃಂಭಣೆಯನ್ನು ಕಾಣುತ್ತಲೇ ಇದ್ದೇನೆ
ಚಲನಚಿತ್ರಗಳ ಸುರುಳಿಯಂತೆ ಸಹಸ್ರ ಸಹಸ್ರ ದೃಶ್ಯಗಳ ಮ್ಯಾರಥಾನ್ !!

ಆದರೂ ಕಂಡಿಲ್ಲ ನಾನಿಲ್ಲಿ
ಒಮ್ಮೆಯೂ ಗಾಂಧಿಯನ್ನು, ಅವರ ಜೀವನದೃಷ್ಟಿಯನ್ನು !!!!
ಒಂದೊಂದು ಮುಖವಾಡಗಳು ಅಲ್ಲಲ್ಲಿ ಇವೆ,
ಸದ್ದಿಲ್ಲದೆ ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿವೆ,
ಅನುಕೂಲಸಿಂಧುವಾಗಿ ನಂಗಾನಾಚ್ ಮಾಡುತ್ತಿವೆ,
ಅದೋ ಅಲ್ಲೊಬ್ಬ ಇಲ್ಲೊಬ್ಬ ಹಳೆಯ ಕಾಲದ ಅಪ್ಪಟ ಗಾಂಧಿವಾದಿ
ಇದ್ದರೂ ಕಾಲೆಳೆಯುತ್ತಾ, ತೆವಳುತ್ತಾ ಹಲ್ಲು ಕಿತ್ತ ಹಾವಿನಂತೆ ವಿಲಿಗುಟ್ಟುತ್ತಾನೆ!!
ಅಬ್ಬರದ ನಡುವೆ ಮುಸುಕು ಮುಸುಕಿನ ಚಿತ್ರವಾಗಿದ್ದಾನೆ!!
ಬಿಟ್ಟಗಣ್ಣು ಬಿಟ್ಟುಕೊಂಡು ಎವೆಯಿಕ್ಕಿ ನೋಡಿ ವಿಷಾದಗೊಳ್ಳುತ್ತೇನೆ...
ಗೋಡ್ಸೆಗಳ ಚಕ್ರಾಧಿಪತ್ಯದಲ್ಲಿ ಗಾಂಧಿಯ ಕುರುಹುಗಳ ಛಾಯೆಯಿಲ್ಲದೆ ಬೆವರುತ್ತೇನೆ...
ನಾನೂ ಗೋಡ್ಸೆಯಾಗುತ್ತಿರುವ ಸೋಜಿಗವನ್ನು ಮೆಲ್ಲುತ್ತಾ ಆತಂಕಗೊಳ್ಳುತ್ತೇನೆ...
ಭಸ್ಮಾಸುರನ ಹಸ್ತ ಧರಿಸಿದ ರಕ್ತ ಬೀಜಾಸುರನ ಸಂತಾನವಾಗುತ್ತಿದ್ದೇನೆ...
ಕಳಚಿ ಬಿದ್ದಿದೆ ಗಾಂಧಿ ಕನ್ನಡಕ,
ತೋಯ್ದು ತೊಪ್ಪೆಯಾಗಿದೆ ಗಾಂಧಿ ಹೊದ್ದ ಶಾಲು,
ಹೊಳಪು ಕಳೆದು ಬಣ್ಣ ಮಾಸಿದ ಗಾಂಧಿ ಕೋಲು,
ಮುರಿದ ಚರಕದ ಚಕ್ರ, ಹರಿದ ನೂಲಿನ ಉಂಡೆ ಬಿದ್ದಿದೆ ಯರ್ರಾಬಿರ್ರಿಯಾಗಿ
ಇದೆಲ್ಲವ ಕಣ್ಣಾರೆ ಕಂಡೂ ಕಾಣದಂತೆ ಮುಖ ತಪ್ಪಿಸುತ್ತೇನೆ..
ಅವರ ಹೆಸರು ಹೇಳಿಕೊಂಡು ಅಟ್ಟ ಹತ್ತಿದ್ದೆ, ಗೆದ್ದು ಬೀಗಿದ್ದೆ
ಈಗ ಆ ಹೆಸರಿನ ಏಣಿ ಎಸೆದು ನಾನೇ ಏಣಿಯಾಗಿದ್ದೇನೆ!!
ಎಷ್ಟು ದಿನ, ಎಷ್ಟು ಹೊತ್ತು ಕೇಳಲೇಬೇಡಿ,
ನನ್ನಾಟ ನಡೆಯುವವರೆಗೆ.. ಭ್ರಮೆಯ ಪೊರೆ ಕಳಚುವವರೆಗೆ
ಬಾಲಂಗೋಚಿಗಳ ಪಡೆ ನಡೆಯುವವರೆಗೆ..
ಅಂಕಪರದೆ ಜಾರುವವರೆಗೆ.. !!!!!!!! ಬದುಕೆಂದರೆ ಇಷ್ಟೇನಾ?????

****



ನಲಿಕಲಿ ಎನ್ನುವ ಪರಿಕಲ್ಪನೆಯ ಕಂಪು

Ravish G N

ಇಂದು ಎಲ್ಲಾ ಸರ್ಕಾರಿ ಶಾಲೆಗಳಲ್ಲು ಈ ನಲಿಕಲಿ ಪರಿಕಲ್ಪನೆಯನ್ನು ಕಾಣಬಹುದು. ಇದು ಒಂದು ರೀತಿಯಲ್ಲಿ ಮಕ್ಕಳ ಕಲಿಕೆಗೆ ಪೂರಕವಾದ ವಾತಾವರಣವನ್ನು ಕಲ್ಪಿಸಿದರೂ, ಅದರಿಂದ ಆಗುವಂತಹ ಅನುಕೂಲ ಆನಾನುಕೂಲಗಳನ್ನು ಚರ್ಚಿಸಬೇಕಾದ ಅಗತ್ಯವಿದೆ. ಇಲ್ಲವೆಂದರೆ ಅದು ಮಕ್ಕಳ ಕಲಿಕೆಯನ್ನು ಮತ್ತಷ್ಟು ಸಂಕುಚಿತಗೊಳಿಸುವ ಸಾಧ್ಯತೆಯಿದೆ. ನಲಿಕಲಿ ಎಂದ ತಕ್ಷಣ ನಮ್ಮ ಮುಂದೆ ಬರುವುದು ಆಗತಾನೆ ಕಲಿಕೆಯ ಹಂತಕ್ಕೆ ಕಾಲಿಡುವ ಮಗುವಿಗೆ ಪಠ್ಯ ಪುಸ್ತಕಗಳು ಹೆಚ್ಚಿನ ಹೊರೆಯಾಗಬಾರದೆಂದು. ಆಟಪಾಠಗಳಲ್ಲಿ ನಲಿಯುತ್ತಾ ಕಲಿ ಕೆಯಾಗಬೇಕೆಂಬ ಉದ್ದೇಶದಿಂದ ಈ ಪರಿಕಲ್ಪನೆಯನ್ನು ಪರಿಚಯಿಸಲ್ಪಟ್ಟಿದೆ. ಅದರಾಚೆಗೆ ನೋಡುವುದಾದರೆ ಈ ನಲಿ ಕಲಿಯಲ್ಲಿ ಎನನ್ನು ಕಲಿಸಬೇಕು ಎಂಬುದು ಸಹ ಒಂದು ರೀತಿಯಲ್ಲಿ ಪ್ರಶ್ನಾರ್ಥಕವಾಗಿಯೇ ಉಳಿದುಕೊಂಡಿದೆ ಎಂದರೂ ತಪ್ಪಾಗಲಾರದು. ಈ ಹಂತದಲ್ಲಿ ಮಕ್ಕಳ ಕಲಿಕೆಯನ್ನು ಆಧರಿಸಿ ಓದಿನಲ್ಲಿ ತುಂಬಾ ಮುಂದಿರುವ ಮಕ್ಕಳ ಒಂದು ತಂಡ ಮದ್ಯಮ ಹಂತದ ತಂಡ, ತೀರ ಹಿಂದುಳಿದ ಒಂದು ತಂಡವನ್ನು ರಚಿಸಿ ಅಯಾಯ ತಂಡಗಳಿಗೆ ಪೂರಕವಾಗಿ ಕಲಿಕೆಯನ್ನು ನೀಡುತ್ತಾರೆ. ಜೊತೆಗೆ ಓದಿನಲ್ಲಿ ಮುಂದಿರುವ ಮಕ್ಕಳನ್ನು ಓದಿನಲ್ಲಿ ಹಿಂದುಳಿದ ತಂಡದೊಂದಿಗೆ ಬಿಟ್ಟಾಗ ಆ ಮಕ್ಕಳ ಅವರೊಟ್ಟಿಗೆ ಒಡನಾಟ ಅವರನ್ನು ಬದಲಾಯಿಸುತ್ತದೆ ಎನ್ನುವ ಕಾರಣದಿಂದ ಈತರನಾದ ಕಲಿಕೆಗೆ ಅವಕಾಶ ಮಾಡಿಕೊಡಲಾಗಿದೆ. ಅದೇ ರೀತಿ ಮದ್ಯಮ ಹಂತದಲ್ಲಿರುವ ಮಗುವಿಗೆ ಸ್ವಲ್ಪ ಪ್ರೇರಣೆ ನೀಡಿದರೆ ಅವರು ಓದು ಸಹ ಮುಂದವರೆಯುತ್ತದೆ.

ಇಷ್ಟೆಲ್ಲಾ ಮಕ್ಕಳ ಆರಂಭದ ಕಲಿಕೆಗೆ ಪೂರಕವಾದ ವಾತಾವರಣವನ್ನು ಕಲ್ಪಿಸಿದರೂ ಸಹ ಅದು ಎಲ್ಲೊ ಒಂದೆಡೆ ಮಕ್ಕಳ ಕಲಿಕೆಯ ದೃಷ್ಟಿಯಿಂದ ಮಕ್ಕಳನ್ನು ಸಂಕುಚಿತ ಮತ್ತು ವೈಯುಕ್ತಿಕ ಕಲಿಕೆಗೆ ಅನುವು ಮಾಡಿಕೊಡುತ್ತಿದ್ದೆವೆ ಎನ್ನುವ ಪ್ರಶ್ನೆ ನಮ್ಮನ್ನು ಕಾಡದೆ ಇರದು. ಏಕೆಂದರೆ ಆಗತಾನೆ ತರಗತಿ ಕೋಣೆಗೆ ಹೆಜ್ಜೆ ಇಡುತ್ತಿರುವ ಮಗುವಿಗೆ ಯಾವ ತರನಾದ ಏನನ್ನು ನೀಡುತ್ತಿದ್ದೆ ಅನ್ನುವುದು ಮುಖ್ಯವಾಗುತ್ತದೆ. ಇಂತಹ ಓದು ಮಗುವಿಗೆ ಆಲಿಸುವ, ಗ್ರಹಿಸಿಕೊಳ್ಳುವ, ಅರ್ಥಮಾಡಿಕೊಳ್ಳುವ, ಪ್ರಶ್ನಿಸುವ, ತರ್ಕದ ಓರೆಗಚ್ಚುವ, ಕಲ್ಪನೆಯನ್ನು ಮಾಡಿಕೊಳ್ಳುವ, ಸಂಬಧಗಳನ್ನು ಅರಿತುಕೊಳ್ಳುವ, ವ್ಯವಹಾರ ಜ್ಞಾನವನ್ನು ತಿಳಿಯುವ, ಸಮಾಜವನ್ನು ಅರ್ಥ ಮಾಡಿಕೊಳ್ಳುವ, ಭಾಷೆ ಮತ್ತು ಲಿಪಿಯನ್ನು ಕಲಿಯುವ ಒಟ್ಟಾರೆ ತನ್ನ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾದ ವಾತಾವರಣವನ್ನು ಕಲ್ಪಿಕೊಳ್ಳಲಿ ಎನ್ನುವ ಕಾರಣದಿಂದ ಕಿರಿಯ ಹಂತದ ಶಿಕ್ಷಣವನ್ನು ನಲಿಕಲಿ ಮೂಲಕ ನೀಡಲಾಗುತ್ತದೆ. ಹಾಗಾದರೆ ಮಗು ತನ್ನ ಹುಟ್ಟಿನಿಂದ ಐದು ವರ್ಷಗಳವರೆಗಿನ ಅವಧಿಯಲ್ಲಿ ಏನನ್ನು ಕಲಿತಿಲ್ಲವೆ ಎಲ್ಲವನ್ನು ಶಾಲೆಗೆ ಬಂದ ಮೇಲೆ ಕಲಿಯುತಾನೆಯೇ ಎಂದರೆ ತಪ್ಪಾಗುತ್ತದೆ. ಈ ಎಲ್ಲಾ ಕೌಶಲಗಳನ್ನು ಶಾಲೆಗೆ ಸೇರುವ ಮುನ್ನವೆ ಕಲಿತಿರುತ್ತದೆ. ನಲಿಕಲಿಯಲ್ಲಿ ಭಾಷೆ ಮತ್ತು ಲಿಪಿಯನ್ನು ಕಲಿಯಲು ಬೇಕಾದ ವಾತಾವರಣವನ್ನು ರೂಪಿಸುವಲ್ಲಿ ಕಸರತ್ತು ಮಾಡುತ್ತಿದ್ದನೆನೊ ಅನ್ನಿಸುತ್ತದೆ. ಏಕೆಂದರೆ ಮಗು ಶಾಲೆಗೆ ಬರುವ ಮುನ್ನವೆ ತನ್ನ ಮನೆಯಲ್ಲಿ ಇಲ್ಲವೆ ಸುತ್ತಲಿನ ಪರಿಸರದಿಂದ ತನಗೆ ಅಗತ್ಯವಾದ ಕಲಿಕೆಯನ್ನು ಕಲಿತಿರುತ್ತದೆ. ತಂದೆ, ತಾಯಿ, ಅಜ್ಜ, ಅಜ್ಜಿ, ಚಿಕ್ಕಪ್ಪ, ದೊಡ್ಡಪ್ಪ, ಮಾವ, ಅತ್ತೆ ಅಣ್ಣ, ತಮ್ಮ ಹೀಗೆ ಮೊದಲಾದವರ ಸಂಬಂದಗಳನ್ನು ಮತ್ತು ಅವರನ್ನು ಗುರುತಿಸುವ ಕಲೆಯನ್ನು ವೃದ್ದಿಸಿಕೊಳ್ಳುತ್ತಾ ಸಾಗುತ್ತದೆ. ಅಂದರೆ ಸಂಬಂದಗಳ ಬಗೆಗೆ ಇಲ್ಲವೆ ಅಜ್ಜ ಅಜ್ಜಿ ಯಾವುದಾದರೆ ಕಥೆ ಹೇಳುತ್ತಿದ್ದರೆ ಮತ್ತೆ ಏನಾಯಿತು, ಅದು ಅಂದರೆ ಏನು ಇದು ಎಂದರೆ ಏನು ಎಂಬೆಲ್ಲಾ ಪ್ರವೃತ್ತಿ ಹಾಗೂ ಪ್ರಶ್ನಿಸುವುದನ್ನು ಕಲಿತಿರುತ್ತದೆ. ಮನೆಯಲ್ಲಿ ಸಣ್ಣ ಪುಟ್ಟ ವಸ್ತುಗಳನ್ನು ಅಂಗಡಿಯಿಂದ ತೆಗೆದುಕೊಂಡು ಬರುವ ಇಲ್ಲವೆ ಮನೆಯವರು ಏನಾದರೂ ತಿಂಡಿಕೊಡಿಸುವಾಗ ಅದು ಚಾಕೊಲೆಟ್ ಐದೊ, ಹತ್ತೊ ಬೇಕೆಂದಾಗ ಅಷ್ಟನ್ನು ಕೊಡಿಸಿದರೆ ಮಾತ್ರ ಸುಮ್ಮನಾಗುತ್ತದೆ ಇಲ್ಲವೆಂದರೆ ಅದು ಹಟಮಾಡುತ್ತದೆ, ಹತ್ತುಕೊಡಿಸುವಲ್ಲಿ ಐದು ಕೊಡಿಸಿದರೆ ಅದು ಇವು ಹತ್ತು ಇಲ್ಲ ಎಂದು ಪ್ರಶ್ನಿಸುವ ವ್ಯವಹಾರ ಜ್ಞಾನವನ್ನು ಕಲಿ ತಿರುತ್ತದೆ. ಅದೇ ರೀತಿ ಅಂಗಡಿಯಲ್ಲಿ ಪಾರ್‌ಲೇಜಿ ಬಿಸಕೆಟ್ ಬೇಕೆಂದು ಕೆಳಿದಾಗ ಮನೆಯವರು ಇದು ಪರ್‌ಲೇಜಿ ಬಿಸ್‌ಕೆಟ್ ಎಂದು ಬೇರೆಯದನ್ನು ತೊರಿಸಿದರೆ ಮಗು ಇದು ಅಲ್ಲ ಅದು ಪಾರ್ಲೇಜಿ ಬಿಸಕೆಟ್ ಎಂದು ಅದನ್ನು ಕೊಡಿಸುವವರೆಗೂ ಬಿಡುವುದಿಲ್ಲ ಅಂದರೆ ಮಗು ಕರಾರುವಕ್ಕಾಗಿ ವಸ್ತುಗಳನ್ನು ಗುರಿತಿಸುವ ಕಲೆಯನ್ನು

ಹೆಚ್ಚಿಸಿಕೊಳ್ಳುತ್ತಾ ಸಾಗುತ್ತಿದೆ ಎಂಬುದು ನಮ್ಮ ಅರಿವಿಗೆ ಬಾರದಿರದು. ಹಾಗೇಯೇ ತಾಯಿ ಮಗುವಿಗೆ ಊಟ ಮಾಡದಿದ್ದ ಸಂದರ್ಭದಲ್ಲಿ ಗುಮ್ಮ ಅಥವಾ ಕರಡಿ ಬರುತ್ತೆ ಎಂದಾಗ ತಕ್ಷಣವೇ ಊಟ ಮಾಡುತ್ತದೆ. ಅಂದರೆ ಆ ಮಗು ಗುಮ್ಮನನ್ನು ನೋಡಿರದಿದ್ದರೂ ಅದನ್ನು ಭಯಾನಕ ರಾಕ್ಷಸ ಎನ್ನವ ಕಲ್ಪನಾ ಲೋಕವನ್ನು ಗ್ರಹಿಸಿಕೊಂಡಿರುತ್ತದೆ. ಅಂದರೆ ಮಗುವಿಗೆ ಕಲ್ಪನೆಯ ಕೌಶಲವು ಗೊತ್ತಿರುತ್ತೆ ಎಂದಾಯಿತು. ಮತ್ತೆ ಮನೆಯಲ್ಲಿ ತಾಯಿ ಅಥವಾ ಅಜ್ಜಿ ಕಥೆ ಹೇಳುವಾಗ ಸರಿಯಾಗಿ ಆಲಿಸುತ್ತಾ ಪ್ರಶ್ನೆಗಳನ್ನು ಹಾಕುತ್ತದೆ. ಆ ಕಥೆಯಲ್ಲಿ ಬರುವ ಸನ್ನಿವೇಶಗಳಿಗೆ ತಕ್ಕಂತೆ ಮತ್ತೇನಾಯಿತು, ಅದು ಹೇಗೆ, ಎಲ್ಲಿ, ಯಾವಾಗ ಎನ್ನುವ ಪ್ರಶ್ನೆಗಳನ್ನು ಕೇಳುತ್ತಿರುತ್ತದೆ. ಅಂದರೆ ಇಲ್ಲಿ ಆಲಿಸುವ ಮತ್ತು ಪ್ರತಿಯೊಂದನ್ನು ಪ್ರಶ್ನಿಸುವ ಜ್ಞಾನವನ್ನು ಸಹ ಕಲಿತಿರುತ್ತದೆ. ಇನ್ನೂ ಭಾಷೆ ಮತ್ತು ಲಿಪಿ ವಿಷಯಕ್ಕೆ ಬಂದರೆ ಮಗು ಶಾಲೆಗೆ ಬರುವ ಮುನ್ನವೆ ಭಾಷೆಯನ್ನು ಕಲಿತಿರುತ್ತದೆ. ಅದು ಗ್ರಾಂತಿಕವಾಗದೇ ರೀತಿಯಲಿ ಇಲ್ಲದಿರಬಹುದು. ಹಾಗಂತ ಭಾಷೆಯನ್ನೇ ಕಲಿತಿಲ್ಲ ಎನ್ನಲಾಗದು. ಲಿಪಿಯ ವಿಷಯದಲ್ಲೂ ಅಷ್ಟೆ ಏಕೆಂದರೆ ಶಾಲೆಗೆ ಬರುವ ಮುನ್ನ ಏನೆನೊ ಗೋಡೆಯ ಮೇಲೆ, ಪುಸ್ತಕದ ಮೇಲೆ, ಎಲ್ಲಂದರೆ ಅಲ್ಲಿ ತನಗೆ ಅನ್ನಿಸಿದನ್ನು ಗೀಚುತ್ತಾ ಹೋಗುತ್ತದೆ. ಅದು ಆ ಮಗುವಿನ ಲೋಕದಲ್ಲಿ ಲಿಪಿಯಾಗಿರುತ್ತದೆ. ಅಂದರೆ ಶಾಲೆಗೆ ಸೇರುವುದಕ್ಕೂ ಮುನ್ನ ಲಿಪಿಗೆ ಬೇಕಾದ ಪೂರ್ವ ಸಿದ್ದತೆಗಳನ್ನು ಮಾಡಿಕೊಂಡೆ ಬರುತ್ತದೆ. ಇನ್ನೂ ಮಾತೃ ಭಾಷೆಯನ್ನು ಬಿಟ್ಟು ಗಡಿ ಭಾಗದಲ್ಲಿ ಇದ್ದರೆ ಅಂತು ಎರಡೆರಡು ಭಾಷೆಗಳನ್ನು ಕಲಿತಿರುತ್ತದೆ. ಅಂದರೆ ಕರ್ನಾಟಕ ಮತ್ತು ಆಂಧ್ರ ಪ್ರದೇಶದ ಗಡಿಗಳಲ್ಲಿ ಅದೇ ರೀತಿ ಕರ್ನಾಟಕ ಮತ್ತು ಮಹಾರಾಷ್ಟ್ರಕ್ಕೆ ಹೊಂದಿಕೊಂಡಂತೆ ಇರುವ ಪ್ರದೇಶಗಳಲ್ಲಿ ಒಂದೆಡೆ ಕನ್ನಡ ಮತ್ತು ತೆಲುಗು ಅದೇ ರೀತಿ ಕನ್ನಡ ಮತ್ತು ಮರಾಠಿಯನ್ನು ಕಲಿತಿರುತ್ತದೆ. ಇಲ್ಲಿ ಕನ್ನಡ ಮಾತೃ ಭಾಷೆಯಾದರೆ ತೆಲುಗೊ ಅಥವಾ ಮರಾಠಿಯನ್ನು ಯಾವುದೇ ಶಾಲೆಗೆ ಹೋಗದೆಯೂ ಆಲಿಸುವ, ಪ್ರಶ್ನಿಸುವ, ಗ್ರಹಿಸುವ ಒಟ್ಟಾರೆ ಎಲ್ಲಾ ರೀತಿಯಲ್ಲೂ ಭಾಷೆಯನ್ನು ಕಲಿಯುತ್ತದೆ. ಇಲ್ಲಿ ಭಾಷೆಯನ್ನು ಕಲಿಯುವಲ್ಲಿ ಉದಾಹರಣೆಗೆ ಕನ್ನಡ ಮಾತೃ ಭಾಷೆಯಾಗಿದ್ದರೆ ತೆಲುಗನ್ನು ಕಲಿಯಲು ತೆಲುಗಿನ ಒಂದೊಂದೆ ಪದಕ್ಕೆ ಕನ್ನಡದಲ್ಲಿ ಅರ್ಥ ಮಾಡಿಸುತ್ತಾ ಕಲಿಸುವುದಿಲ್ಲ. ಮಗುವಿಗೆ ತನ್ನ ಸುತ್ತಲಿನ ಪರಿಸರವೇ ಮತ್ತೊಂದು ಭಾಷೆ ಕಲಿಕೆಗೆ ಪೂರಕವಾದ ವಾತಾವರಣವನ್ನು ಕಲ್ಪಿಸುತ್ತದೆ. ಆದರೆ ಇಂದು ತರಗತಿಯಲ್ಲಿ ಮಕ್ಕಳ ಕಲಿಕೆಗೆ ಮುಕ್ತವಾದ ವಾತಾವರಣ ಕಲ್ಪಿಸುತ್ತಿಲ್ಲ. ಬದಲಾಗಿ ಸ್ವತಂತ್ರತೆ ನೀಡದೆ ವೈಯುಕ್ತಿಕ ಕಲಿಕೆಗೆ ಅಂದರೆ ಎಲ್ಲಾ ಮಕ್ಕಳು ಒಟ್ಟಿಗೆ ಕಲಿಕೆಗೆ ವಿರುದ್ದವಾದ ಒಂದೊಂದು ಮಗುವಿಗೂ ಪ್ರತ್ಯೇಕತೆಯನ್ನು ನೀಡುತ್ತಿದ್ದೆವೆ. ಅಲ್ಲದೆ ಮಾತೃ ಭಾಷೆಯೊಟ್ಟಿಗೆ ಇತರ ಭಾಷೆಗಳನ್ನು ಕಲಿಯಲು ಗ್ರಾಂತಿಕತೆಯ ಕಂಪನ್ನು ನೀಡುತ್ತಿದ್ದೆವೆ ಅಂದರೆ ಉದಾಹರಣೆಗೆ ಹೇಳುವುದಾದರೆ ಎಲಿಫೆಂಟ್ ಎನ್ನುವ ಆಂಗ್ಲ ಪದವನ್ನು ಕನ್ನಡದಲ್ಲಿ ಅರ್ಥ ಮಾಡಿಕೊಳ್ಳಲು ಎಲಿಫೆಂಟ್ ಎಂದರೆ ಆನೆ ಎಂದರ್ಥ ಎಂದು ಆಂಗ್ಲ ಭಾಷೆಯ ಒಂದೊಂದು ಪದಕ್ಕೂ ಕನ್ನಡದಲ್ಲಿ ಅರ್ಥವನ್ನು ಹೇಳುತ್ತಾ ಭಾಷೆಯನ್ನು ಕಲಿಸುತ್ತಿದ್ದೆವೆ. ಏಕೆಂದರೆ ಗಡಿ ಭಾಗಗಳಲ್ಲಿ ಮಗು ಮಾತೃ ಭಾಷೆಯ ಜೊತೆ ಜೊತೆಯಲ್ಲೇ ಯಾವ ಶಾಲೆಗೆ ಹೊಗದೇ ಭಾಷೆಗಳನ್ನು ಕಲಿಯುತ್ತದೆ.

ನಲಿಕಲಿ ಎನ್ನುವ ಪರಿಕಲ್ಪನೆ ಒಂದು ಹಂತದಲ್ಲಿ ಮಗುವಿಗೆ ಇತರ ಭಾಷೆಗಳನ್ನು ಕಲಿಯಲು ಗ್ರಾಂತಿಕತೆಯ ಕಂಪಿನಿಂದ ದೂರವೇ ಇರಿಸುತ್ತದೇ. ಇನ್ನೂ ಸ್ವಲ್ಪ ಮುಂದಕ್ಕೆ ಹೋಗಿ ಮಕ್ಕಳನ್ನು ಉತ್ತಮ, ಮದ್ಯಮ, ಹಿಂದುಳಿದ ಎನ್ನುವ ಮೂರು ಗುಂಪುಗಳ ಮೂಲಕ ವಿಭಜಿಸಿ ಕಲಿಕೆಗೆ ವೇದಿಕೆ ಸಿದ್ದಗೊಳಿಸಿದ್ದರೂ ಮೂರು ಹಂತದ ಮಕ್ಕಳನ್ನು ಒಟ್ಟಿಗೆ ಸೇರಿಸುವಂತಹ ವೇದಿಕೆಯನ್ನು ಸಿದ್ದಗೊಳಿಸಿಕೊಳ್ಳಬೇಕಾಗಿದೆ. ಏಕೆಂದರೆ ಮಗು ಗಡಿ ಭಾಗಗಳಲ್ಲಿ ಭಾಷೆಯನ್ನು ಕಲಿಯಲು ಉತ್ತಮ, ಮದ್ಯಮ, ಹಿಂದುಳಿದ ಎನ್ನುವ ಹಂತಗಳ ರೀತಿಯಲ್ಲಿ ಕಲಿಯುವುದಿಲ್ಲ. ಏಕೆಂದರೆ ಮಗು ಭಾಷೆ ಕಲಿಯಲು ಎಲ್ಲರೊಟ್ಟಿಗಿನ ಒಡನಾಟದ ವೇದಿಕೆಯನ್ನು ತನ್ನಷ್ಟಕ್ಕೆ ತಾನೆ ಸಿದ್ದಗೊಳಿಸಿಕೊಳ್ಳುತ್ತದೆ. ಹಾಗಾಗಿ ಈ ತರನಾದ ವೇದಿಕೆಯೊಂದು ನಲಿಕಲಿಯಲ್ಲಿ ಸಿಕ್ಕರೆ ಮಗುವಿಗೆ ಆರಂಭದಲ್ಲಿಯೇ ಮುದ ನೀಡುವ ವೇದಿಕೆಯನ್ನು ರೂಪಿಸಲು ಸಾಧ್ಯವಾಗುತ್ತದೆ. ಹೀಗೆ ಇದ್ದಾಗ ಮಾತ್ರವೇ ಶಾಲೆಗೆ ಸೇರದೇ ಇರುವ ಮಕ್ಕಳಲ್ಲಿರುವ ಜ್ಞಾನ ಶಾಲೆಗೆ ಸೇರುವ ಮಕ್ಕಳಿಗೂ ಸಿಗುತ್ತದೆ ಇಲ್ಲವೆಂದರೆ ಆ ಮಗುವಿನ ಜ್ಞಾನ ಕೇವಲ ಪಠ್ಯ ಪುಸ್ತಕಕ್ಕೆ ಮಾತ್ರ ಸೀಮಿತ ಗೊಳ್ಳುತ್ತದೆ. ಅಂದರೆ ಶಾಲೆಗೆ ಸೇರದೆ ಇರುವ ಮಗು ತನ್ನ ಬದುಕಿಗೆ ಬೇಕಾದ ವ್ಯವಹಾರ ಜ್ಞಾನವನ್ನು ತನ್ನ ಸುತ್ತಲಿನ ಪರಿಸರದಿಂದಲೇ ಕಲಿತಿರುತ್ತದೆ. ಉದಾಹರಣೆಗೆ ತರಕಾರಿ ಮಾರುವವನ ಮಗು 50ಕೆಜಿ ಸಕ್ಕರೆ ಅಥವಾ ಇನ್ನಾವುದೊ ವಸ್ತುವಿಗೆ ಪ್ರತಿ ಕೆಜಿಗೆ 17 ರೂಪಾಯಿಯಂತೆ ಆದಾಗ ಒಟ್ಟು ಎಷ್ಟಾಗುತ್ತೆ ಎಂದು ಕೇಳಿದಾಗ ತಕ್ಷಣವೇ ಹೇಳುತ್ತೆ ಅದೇ ಶಾಲೆಗೆ ಸೇರಿರುವ ಮಗುವಿಗೆ ಕೇಳಿದಾಗ ಮೊಬೈಲ್ ಇಲ್ಲವೊ ಕ್ಯಾಲಿಕ್‌ಲೆಟರ್ ಮೊರೆ ಹೋಗುತ್ತದೆ. ಇದೇ ಶಾಲೆಗೆ ಸೇರುವ ಮತ್ತು ಶಾಲೆಗೆ ಸೇರದಿರುವ ಮಗುವಿಗೆ ಇರುವ ವ್ಯತ್ಯಾಸ.

ಆದರೆ ಶಾಲೆಗೆ ಸೇರದಿರುವ ಮಗುವಿಗೆ ಓದು ಬರಹದ ಜ್ಞಾನ ಇರುವುದಿಲ್ಲ. ಹಾಗಾಗಿ ಮಗುವಿಗೆ ಪ್ರಾಥಮಿಕ ಹಂತದಲ್ಲೇ ತನ್ನ ವ್ಯಕ್ತಿತ್ವಕ್ಕೆ ಬೇಕಾದ ವೇದಿಕೆಯನ್ನು ನಲಿಕಲಿ ನೀಡುವಂತಾಗಬೇಕು. ಒಂದು ಹಂತದಲ್ಲಿ ಈ ನಲಿಕಲಿ ಯು ಮಗುವನ್ನು ಗ್ರಾಂತಿಕತೆ ಕಂಪಿನಿಂದ ದೂರವೇ ಇರುವಂತೆ ಮಾಡುತ್ತದೆ. ಮಗು ತನ್ನ ಸುತ್ತಲಿನ ಪರಿಸರದಲ್ಲಿ ಭಾಷೆಯನ್ನು ಹೇಗೆ ಕಲಿಯುತ್ತದೊ ಆ ತರನಾದ ವಾತಾವರಣ ಈ ನಲಿಕಲಿ ಸಿದ್ದಪಡಿಸುತ್ತಿರುವುದು ಉತ್ತಮ ಬೆಳವಣಿಗೆ ಎಂದರೆ ತಪ್ಪಾಗಲಾರದು. ಹಾಗಾಗಿ ಇದನ್ನು ಎಲ್ಲಾ ಸರ್ಕಾರಿ ಶಾಲೆಗಳಲ್ಲೂ ಸರಿಯಾದ ರೀತಿಯಲ್ಲಿ ಕಂಪನ್ನು ಹರಡುವಂತಾದರೇ ಮಾತ್ರ ಈ ಪರಿಕಲ್ಪನೆ ಯಶಸ್ವಿಯಾಗುತ್ತದೆ.





Perhaps one of the great narrators of the time, Ramachandra Guha has come up again with another stellar work in the name of Democrats and Dissenters. The is a collection of essays of Ram published in 2016 which encompassed in two parts. Part-1 is titled Politics and Society, and part-II is named as Ideological and Intellectuals.

Part-I of the book, in many ways, I consider it as an effort to capture the different dimension of Indian polity since Independence. The book is prolifically analyzed the post independent polity in a comprehensive way covering the lingering issues Indian political party, speaks about the issues in neighboring states of India, our tribal concerns and looks upon some uneventful tough days in the Indian journey of democracy. Ram was critical about the present status of affairs of Indian National Congress. He questions the historical understanding of the present day key leaders of INC. In a separate chapter, the author gave a glimpse about the intellectual argument that had happened between Nehru and JP, and throw the light on democratic ideas & difference of the stalwarts. The book is even more interesting when the author brings forth the idea of mono-cultural-nationalism that has been a significant tenant of some of Indian neighboring states (such as Pakistan, China, Srilanka) which resulted in differences, discrimination, and led to gross bloodsheds in those countries (while discussing the issues of neighboring states, a throws light on some of the ideas that we see in India- such as multi-lingual approach and cultural diversity). Afterward in two chapters, speaks about the state of affairs of tribal in India, and major bloodsheds that happened in India after partition due to communal tensions and terrorism- to mention few years-1984 & 2008)

In the second part, Guha serves us an intellectual delicacy to the readers by discussing some the profound persons from India as well as abroad. One of the chapters dedicated to Domadhar Kosambi is may be a surprise for the reader, in which, the author brings a quite remote but interesting details of Kosambi and calls him as a Gandhian Buddhist. One of the acknowledgeable fact of this book is, the author also shares a chapter about one of the regional intellectual figure (Dr. UR Ananthamurthy), and described his experience and analysis of Dr. UR Ananthamurthy. One of the hotly debated idea (nationalism) in the current politics is covered intellectually in the chapter known as Travelling with Tagore, in which, author brings an ideological difference between Gandhi and Tagore over nationalism. Tagore's experience of nationalism with Japan, Europe, and the US has analyzed extensively well to understand the present form of nationalism and its phase in India

Overall, the book is a true reflection and analysis of dynamics of Indian polity, and affairs in neighboring countries which places in India distinctively. Along with that book is also evaluates an account of the intellectual contribution of various stalwarts. From the reader's point of view, in this book, the narration is a plus point which encourages the reader to immerse with textual details, it also introduces or discuses few academic figures whom the general public may not even hear off. The book makes the reader bit slow while engaging the tribal tragedies as the narrative is sided with a lot of information. Otherwise, it is a prolific work which captures the essence in a true sense

ಹಿಪ್ಪೋಪೊಟಮಸ್

ಕೆಸರ ಕೊಳಚೆಯಲ್ಲಿ ಮೈ ಅದ್ದಿ
ಬಿದ್ದದೆದ್ದು ಹೊರಳಾಡಿ,
ನೋಡಲು ಬಲ ಬಂಡೆಯಂತೆ ಬಿಂಬಿಸಿದ
ಈ ಹಿಪ್ಪೋಪೊಟಮಸ್,
ಆದದ್ದು ಮಾಂಸಗಳ ಮುದ್ದೆಯಲಿ.

ರಕ್ತ ಮಾಂಸಗಳಿಂದ ಕೂಡಿ
ನಿಶ್ಯಕ್ತ ಬಲಹೀನತೆ ತೋರುವ,
ಬಲಬಂಡೆಯಿದು! ಆದರೆ ನಮ್ಮ ಪ್ರಾರ್ಥನಾಲಯ ಹೀಗಲ್ಲ;
ಅದು ಕಲ್ಲು ಬಂಡೆಯ ಗೋಪುರ
ಅದಕ್ಕೆಲ್ಲಿ ಭಯಭೀತಿ.

ಈ ಹಿಪ್ಪೋ, ನಡೆಯುವ ದಾರಿಯಲ್ಲಿ
ನಡುಕಾಡಿ ಬೀಳಬಹುದು. ನಮ್ಮ ನಿಜ ಪ್ರಾರ್ಥನಾಲಯ ಬೀಳಲು ಸಾಧ್ಯವೇ?
ಏಕೆಂದರೆ ಅದು ಕಲ್ಲು ಗೋಪುರ.

ಹಿಪ್ಪೋ ಮರವೇರಿ ಮಾವು ತಿನ್ನಲು ಸಾಧ್ಯವೇ?
ಪಾಪಿ ಹಿಪೋ; ಆದರೆ ನಮ್ಮ ಸತ್ಯ ಪ್ರಾರ್ಥನಾಲಯಕ್ಕೆ
ರುಚಿಕರ ದಾಳಿಂಬೆ, ಫಲಭಕ್ಷ್ಯ
ಸಮುದ್ರದಾಚೆಯಿಂದ ಬಂದೊಡ್ಡಿ
ಭಕ್ಷಿಸಲು ಈ ಕಲ್ಲು ಗೋಪುರ.

ಮಿಲನದಲಿ, ಕರ್ಕಷ ಧ್ವನಿ ಮಾಡಿ
ಕೂಗುವ ಅನಿಷ್ಠ ಹಿಪೋ ಇದು
ನಮ್ಮ ಪಾರ್ಥನಾಲಯದಂತಲ್ಲ.
ನಾವು ಪ್ರತಿವಾರ ನಮ್ಮ ದೇವ ಮತ್ತು ಆಲಯವನ್ನು
ಮಿಲನಿಸಲು ಕೂಗುತ್ತೇವೆ ಬಿರುಸಾಗಿ.

ಹಗಲಲ್ಲಿ ಮಲಗಿ ರಾತ್ರಿ ಭೇಟಿಯಾಡಿ
ತಿನ್ನುವ ಈ ಹಿಪೊಕ್ಕೇನು ಗೊತ್ತು?
ನಮ್ಮ ನಿಗೂಢ ಪ್ರಾರ್ಥನಾಲಯ,
ಎರಡನ್ನು ಒಮ್ಮೇಯೇ ಮಾಡುವುದೆಂದು.

ನಾ! ಒಮ್ಮೆ ನೋಡಿದೆ ಈ ಪಾಪಿ
ಹಿಪೋಕ್ಕೆ ರೆಕ್ಕೆ ಬಂದು ಹಾರಿ,
ದೇವಕನ್ಯೆಯರಿಂದ ಹೊಗಳಿ
ಹಾರಿ ಹೋಯಿತವನಬಳಿ.
ಅಲ್ಲಿ ಈ ಪಾಪಿ ಬಂಡೆಹಿಪ್ಪೋದ,
ಮೈಯನ್ನ, ಸಣ್ಣ ಕುರಿ ಮೈಯ ರಕ್ತದಿಂದ ಶುಚಿಗೊಳಿಸಿ,
ಋಷಿ ಮುನಿಗಳಿಂದ ಹಾರೈಸಿ,
ನುಡಿಸಿತು ದೇವ ತಂತಿಯನು.

ಹಿಮಬಿಳಿಯಂತೆ ಕಂಗೊಳಿಸಿ,
ದೇವ ಕನ್ಯೆಯರಿಂದ ಮುತ್ತುಂಡು, ಖುಷಿಯಲಿ.
ಆದರೆ! ನಮ್ಮ ಸೃಜನ ಪ್ರಾರ್ಥನಾಲಯ.
ಅದೇ ದುರ್ಗಂಧದಿಂದ ಸುರುಳಿಸುತ್ತಿ,
ಬೇರೂರಿ ನಿಂತಿದೆ ಅಲುಗಾಡದೆ.

The poem “Hippopotamus” was written by T.S Eliot. This poem uses satirical humor to compare to Christian church to a hippopotamus. Although Eliot’s views of church were quit serious, he uses this poem to poke fun at Christianity and, perhaps, at his own personal feelings towards the religion. In the end, the hippopotamus is the victor in the balancing act, making the journey to Heaven while the church remains left behind.

ಮೂಲ ಪದ್ಯ : ಹಿಪ್ಪೊಪೊಟಮಸ್ (ಟಿ .ಎಸ್ ಎಲಿಯಟ್)
ಕನ್ನಡಕ್ಕೆ ಅನುವಾದ : ವಿರೇಂದ್ರ ಪಾಟೀಲ ಗೌಡ ಸಿ.ಕೆ.

ಚೆನ್ನಾಗಿ ನಡೆದ ಒಂದು ದೊಡ್ಡ ಕೆಲಸ

ಕರಡು ರಾಷ್ಟ್ರೀಯ ಶಿಕ್ಷಣ ನೀತಿ 2019

ಎಸ್ ಗಿರಿಧರ್, ಡೆಕ್ಕನ್ ಹೆರಾಲ್ಡ್, 10 ಜೂನ್, 2019

ಮೊತ್ತ ಮೊದಲ ರಾಷ್ಟ್ರೀಯ ಶಿಕ್ಷಣ ನೀತಿಯು ಪ್ರಕಟವಾದ್ದು 1968ರಲ್ಲಿ. ಅದು 1966ರ ಕೊಥಾರಿ ಆಯೋಗದ ಕನಸನ್ನು ಜಾರಿಗೊಳಿಸುವುದಕ್ಕೆ ದಾರಿಮಾಡಿಕೊಟ್ಟಿತು. ಅದಾಗಿ 18 ವರ್ಷಗಳ ನಂತರ ಎರಡನೆ ರಾಷ್ಟ್ರೀಯ ಶಿಕ್ಷಣ ನೀತಿ ಶ್ರೀ ರಾಜೀವ ಗಾಂಧಿ ಪ್ರಧಾನ ಮಂತ್ರಿಯಾಗಿದ್ದ ಅವಧಿಯಲ್ಲಿ ರೂಪುಗೊಂಡಿತು. ಅಲ್ಲಿಂದ ಈಚೆಗೆ ಬಹಳ ಬದಲಾವಣೆಗಳಾಗಿವೆ. ಈ 33 ವರ್ಷಗಳ ರಾಜಕೀಯ–ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಗೆ ಬಿರುಗಾಳಿಯ ವೇಗವೇ ಇತ್ತು.

ಈ ಅವಧಿಯ ಯಾವುದೆ ಸರಕಾರವನ್ನು ನೋಡಬಹುದು, ಅವು ಎದ್ದುಕಾಣುವ ಒಂದಲ್ಲ ಒಂದು ಪರಿಣಾಮಕಾರಿ ಯೋಜನೆಯನ್ನು ಎತ್ತಿಕೊಂಡು ಜಾರಿಗೊಳಿಸಿದ್ದನ್ನು ನ್ಯಾಯವಾಗಿಯೆ ಒಪ್ಪಿಕೊಳ್ಳಬೇಕು. ಅದು ಎನ್‌ಡಿಎ – 1ರ ಅವಧಿಯ ಸರ್ವ ಶಿಕ್ಷಾ ಅಭಿಯಾನ ಇರಬಹುದು, ಯುಪಿಎ ಅವಧಿಯ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2005 ಮತ್ತು ಶಿಕ್ಷಣ ಹಕ್ಕು ಕಾಯ್ದೆ 2009 ಇರಬಹುದು. ಹೀಗಿರುವಾಗ ಈಗೇನು ಬೇಕಿದೆ ನೋಡಿದರೆ– ಹೊಸ ಉಸಿರಿನ, ಸಮಗ್ರ, ಭವಿಷ್ಯದೆಡೆಗೆ ದೃಷ್ಟಿನೆಟ್ಟ ಮತ್ತು ಸುಲಲಿತ ಜಾರಿಯ ತಂತ್ರಗಳನ್ನು ಒಳಗೊಂಡ ಶಿಕ್ಷಣ ನೀತಿ ಎನ್ನಬಹುದು.

ಇದನ್ನು ಯಾಕೆ ಹೇಳುತ್ತಿರುವೆ ಎಂದರೆ ಡಾ. ಕಸ್ತೂರಿರಂಗನ್ ಅವರ ನೇತೃತ್ವದ ಸಮಿತಿ ತಯಾರಿಸಿ ಪ್ರಕಟಿಸಿದ ಕರಡು ಶಿಕ್ಷಣ ನೀತಿ 2019ರ ಕೆಲಸ ಎಷ್ಟು ದೊಡ್ಡದು ಮತ್ತು ಮಹತ್ತಿನದು ಎಂಬುದನ್ನು ನಾವು ಸರಿಯಾಗಿ ಗಮನಿಸುವುದು ಸಾಧ್ಯವಾಗಬೇಕು ಎಂದು. ನನ್ನ ಸಿಇಒ ಸೇರಿದಂತೆ ಇನ್ನಿತರ ಕೆಲವು ಸಹೋದ್ಯೋಗಿಗಳು ಇದರ ತಯಾರಿಯ ಪ್ರಕ್ರಿಯೆಯಲ್ಲಿ ಆಳವಾಗಿ ತೊಡಗಿಸಿಕೊಂಡಿದ್ದರು. ಇದನ್ನು ಹೇಳುವ ಅಗತ್ಯವಿದೆ ಅಂದುಕೊಂಡಿದ್ದೇನೆ ಯಾಕೆಂದರೆ ಆ ಮೂಲಕ ನನಗೂ ಕಳೆದ 18 ತಿಂಗಳ ಸಮಿತಿಯ ಶ್ರಮದಾಯಕ, ಬೃಹತ್ ಮತ್ತು ಸಾರ್ಥಕ ಕಾರ್ಯದ ಇಣುಕುನೋಟ ಕಾಣುವುದಕ್ಕಾಗಿದೆ ಎನ್ನುವುದಕ್ಕೆ. ಅವರು ಬಹಳ ವ್ಯಕ್ತಿಗಳನ್ನು ಮತ್ತು ಸಂಸ್ಥೆಗಳನ್ನು ಸಂಪರ್ಕಿಸಿದರು, ಅವರ ಸಲಹೆಗಳನ್ನು ಪಡೆದರು, ಆಲೋಚನೆಗಳನ್ನು ಉದ್ದೀಪಿಸಿದರು, ಉಪಯುಕ್ತ ಮತ್ತು ಅತ್ಯವಶ್ಯಕ ಮಾಹಿತಿಗಳನ್ನು ಮತ್ತು ಸಂಶೋಧನಾ ವರದಿಗಳನ್ನು ಕಲೆಹಾಕಿದರು.

ಹೀಗೆ ತೀವ್ರಗತಿಯ ಶ್ರಮದಾಯಕ ಪ್ರಯತ್ನದ ಫಲವಾಗಿ ಮಾನವ ಸಂಪನ್ಮೂಲ ಸಚಿವಾಲಯದಿಂದ 477 ಪುಟಗಳ ಕರಡು ನೀತಿ ಸಾರ್ವಜನಿಕ ವಲಯದ ಪರಿಶೀಲನೆಗೆ ಹೊರಬಂದಿದೆ. ಇದು ಶಾಲಾ ಶಿಕ್ಷಣ, ಪ್ರೌಢ ಶಿಕ್ಷಣ, ನಿರ್ದಿಷ್ಟ ಗಮನವನ್ನು ಅಪೇಕ್ಷಿಸುವ ಕ್ಷೇತ್ರಗಳನ್ನು ಪರಿಗಣಿಸುವ, ಅಗತ್ಯವಿರುವ ಆಡಳಿತ ಸುಧಾರಣೆಗೆ ಸಲಹೆ, ಸೂಕ್ತ ನಿಯಮನಿಯಂತ್ರಣಗಳ ಸೂಚಿ ಮತ್ತು ಹಣಕಾಸು ಹೂಡಿಕೆ ಕುರಿತ ಸಲಹೆಗಳಿರುವ 5 ಭಾಗ ಮತ್ತು 25 ಅಧ್ಯಾಯಗಳಲ್ಲಿರುವ ದಾಖಲೆಯಾಗಿದೆ.

2019ರ ಈ ಕರಡು ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿರುವ ಕೆಲವು ನಿರ್ಣಾಯಕ ಅಂಶಗಳ ಕುರಿತು ಗಮನಹರಿಸುವ.

- ಶಿಕ್ಷಣದ ಹಕ್ಕು ಪಡೆಯುವ ಮಕ್ಕಳ ವಯೋಮಾನವನ್ನು ಈಗಿರುವ 6ರಿಂದ 14 ವರ್ಷಗಳಿಂದ 3ರಿಂದ 18 ವರ್ಷಗಳು ಎಂದು ವಿಸ್ತರಿಸಬೇಕು. ಈ ಬಗ್ಗೆ ನಾವು ಬಹಳ ಜನರು 10 ವರ್ಷಗಳ ಹಿಂದೆ ಶಿಕ್ಷಣ ಹಕ್ಕು ಕಾಯ್ದೆ ಜಾರಿಗೆ ಬಂದ ಲಾಗಾಯ್ತು ಒತ್ತಾಯಿಸುತ್ತಲೆ ಇದ್ದೆವು.
- 2015ರ ಒಳಗೆ 3ರಿಂದ 6 ವರ್ಷ ವಯೋಮಾನದ ಎಲ್ಲಾ ಮಕ್ಕಳಿಗು ಆದ್ಯತೆಯಿಂದ ಉನ್ನತ ಗುಣಮಟ್ಟದ ಬಾಲ್ಯಕಾಲದ ರಕ್ಷಣೆ (ಆರೋಗ್ಯ, ಪೌಷ್ಟಿಕತೆಗಳು ಸೇರಿದಂತೆ) ಮತ್ತು ಅರಂಭಿಕ ಶಿಕ್ಷಣವನ್ನು ಒದಗಿಸುವ ಬಗ್ಗೆ ಈ ನೀತಿಯಲ್ಲಿ ಒತ್ತುಕೊಟ್ಟಿದೆ. ಇದು ಆಗಲೇ ಬೇಕಿರುವ ಒಂದು ಕಾರ್ಯಕ್ರಮಕ್ಕೆ ದಿಕ್ಸೂಚಿಯಾಗಿದೆ.
- 5+3+3+4 ವರ್ಷಗಳ ಶಿಕ್ಷಣ ಗತಿಯನ್ನು ನೀತಿಯಲ್ಲಿ ಮಂಡಿಸಿರುವುದು ಆರಂಭದ 5 ವರ್ಷಗಳ ಪ್ರಾಥಮಿಕ ಶಿಕ್ಷಣವು – ಮುಂದುವರೆಯುವ ಹಿರಿಯ, ಪ್ರೌಢ ಮತ್ತು ಪದವಿ ಪೂರ್ವ ಮತ್ತು ಪದವಿ ಶಿಕ್ಷಣಕ್ಕೆ – ನಿರ್ಣಾಯಕ ಮತ್ತು ತಳಪಾಯ ಸ್ವರೂಪದ್ದು ಎಂಬುದನ್ನು ಎತ್ತಿಹಿಡಿಯುತ್ತದೆ.

- ಹುಟ್ಟು ಮತ್ತು ಹಿನ್ನಲೆಯ ಕಾರಣಕ್ಕೆ ಯಾವುದೆ ಮಗು ಕಲಿಯುವ ಮತ್ತು ತನ್ನ ಪ್ರತಿಭೆಯನ್ನು ಪೂರ್ಣ ಪ್ರಮಾಣದಲ್ಲಿ ಬೆಳೆಸಿಕೊಳ್ಳುವ ಅವಕಾಶದಿಂದ ವಂಚಿತವಾಗದಿರುವುದನ್ನು ಖಾತರಿ ಮಾಡುವ ಒಟ್ಟಂದದ ಪ್ರಯತ್ನಗಳ ಪಟ್ಟಿಮಾಡಲಾಗಿದೆ.
- 2025ರ ವೇಳೆಗೆ ಪ್ರತಿ ಮಗುವೂ ವಯೋಮಾನಾನುಗುಣವಾಗಿ ಅಕ್ಷರ ಮತ್ತು ಗಣಿತದ ಸಾಮರ್ಥ್ಯಗಳ ಅಡಿಪಾಯವನ್ನು ಪಡೆಯುವುದನ್ನು ಖಾತರಿಪಡಿಸುವ ಸರಣಿ ಕ್ರಮಗಳನ್ನು ಗುರುತಿಸಿ ಸೂಚಿಸಲಾಗಿದೆ. ಇವು ನಮ್ಮ ಶಿಕ್ಷಣ ವ್ಯವಸ್ಥೆ ಎದುರಿಸುತ್ತಿರುವ ಕರಾಳ ಪರಿಸ್ಥಿತಿಯನ್ನು – ಅಂದರೆ ನಮ್ಮ ಮಕ್ಕಳು ಓದಲಾರದ, ಬರೆಯಲಾಗದ ಮತ್ತು ಮೂಲಭೂತ ಗಣಿತವನ್ನು ಕೈಗೊಳ್ಳಲಾಗದ ಪರಿಸ್ಥಿತಿಯನ್ನು – ಎದುರಿಸುವುದಕ್ಕೆ ಅಗತ್ಯವಿರುವ ವಿಷಯಗಳಾಗಿವೆ.
- ಶಿಕ್ಷಕರ ಕೇಂದ್ರ ಪಾತ್ರವನ್ನು ಇದು ಮನ್ನಿಸುತ್ತದೆ. ಶಿಕ್ಷಕರ ವಿದ್ಯಾರ್ಹತೆ ಏನಿರಬೇಕು, ಅವರ ನೇಮಕಾತಿ ಹೇಗೆ ಪಾರದರ್ಶಕವಿರಬೇಕು, ಗುಣಮಟ್ಟ ಮತ್ತು ಸಾಮರ್ಥ್ಯಗಳು ಏನಿರಬೇಕು ಎಂಬ ಕುರಿತು ಮಾರ್ಗದರ್ಶಿ ನಿಯಮಗಳಿವೆ. 2030ರ ಒಳಗೆ, ಶಿಕ್ಷಕರಾಗಿ ನೇಮಕವಾಗುವವರು 4 ವರ್ಷಗಳ ಅವಧಿ ಮತ್ತು ನಿರ್ದಿಷ್ಟ ಹಂತಗಳ, ಸಮನ್ವಯಿತ, ವಿಷಯ ನಿರ್ದಿಷ್ಟ ಪದವಿ ಪಡೆದುಕೊಳ್ಳುವುದು ಅಗತ್ಯವಾಗುತ್ತದೆ. ನೀತಿ ಹೇಳುವಂತೆ, ಕೆಳಮಟ್ಟದ ಮತ್ತು ಕಳಪೆ ಸಾಧನೆಯ ಶಿಕ್ಷಕ ಶಿಕ್ಷಣ ಸಂಸ್ಥೆಗಳನ್ನು ಮುಚ್ಚಲಾಗುತ್ತದೆ. ಶಿಕ್ಷಕ ತಯಾರಿ ಕಾರ್ಯಕ್ರಮಗಳು ತೀವ್ರತೆಯುಳ್ಳ ಮತ್ತು ಗುಣಮಟ್ಟದ ಸಾಧನೆಯೆಡೆಗೆ ಪರಿಶ್ರಮ ಪಡುವಂತಹುದು ಆಗಿರಬೇಕು. ಅವು ತೀವ್ರತೆ, ಉತ್ಸುಕತೆ ಮತ್ತು ಅಂತರ್‌ವಿಷಯ ಕಲಿಕೆ ಸಾಧ್ಯವಾಗುವ ಉನ್ನತ ಶಿಕ್ಷಣ ಸಂಸ್ಥೆಗಳ ನೇತೃತ್ವದಲ್ಲಿ ನಡೆಯಬೇಕು.
- ನಮ್ಮ ಉನ್ನತ ಶಿಕ್ಷಣದ ಇಂದಿನ ಪರಿಸ್ಥಿತಿ ಬಗ್ಗೆ ಕಟು ಅವಲೋಕನವನ್ನು ಮತ್ತು ಅದರ ಬದಲಾವಣೆಗೆ ಸ್ಪಷ್ಟ ದಿಕ್ಸೂಚಿಯನ್ನು ದಾಖಲೆಯೊಳಗೆ ಕಾಣಬಹುದು. 40000 ಸಂಖ್ಯೆಯ ಸಾಲುಸಾಲು ಕಾಲೇಜುಗಳು ಮತ್ತು 800 ವಿಶ್ವವಿದ್ಯಾನಿಲಯಗಳು – ಬಹುಸಂಖ್ಯೆಯವು ಕಳಪೆ ಗುಣಮಟ್ಟದವು ಮತ್ತು ವಿದ್ಯಾರ್ಥಿಗಳ ದಾಖಲೆ ಸಾಂಕೇತಿಕವಾಗಿರುವವು – ಸಮಸ್ಯೆಗೆ ಕಾರಣವಾಗಿರುವ ಬಗ್ಗೆ ನೇರನೇರ ಹೇಳಲಾಗಿದೆ. ಇವನ್ನು 15000 ಸಂಖ್ಯೆಯ ಜೀವಂತ, ಉತ್ಸುಕ ಮತ್ತು ಬಹುಶಿಸ್ತೀಯ ಸಂಸ್ಥೆಗಳಾಗಿ ಮಾರ್ಪಡಿಸುವ ಪ್ರಸ್ತಾಪವು ದಾಖಲೆಯಲ್ಲಿದೆ. ಪದವಿ ಪೂರ್ವ ಶಿಕ್ಷಣದ ಪಠ್ಯಕ್ರಮವು ವಿಜ್ಞಾನ, ಮಾನವಿಕ ವಿಜ್ಞಾನ, ಕಲೆ, ಗಣಿತ ಮತ್ತು ವೃತ್ತಿ ಬೋಧನೆಯ ಸಮಗ್ರ, ಸಮನ್ವಯಿತ ಮತ್ತು ಪ್ರಯತ್ನಪೂರ್ವಕ ಕಲಿಯುವಿಕೆಯನ್ನು ಸಾಧ್ಯಮಾಡಿಕೊಡುವ ಗುರಿಹೊಂದಿರಬೇಕೆಂಬ ಪ್ರಸ್ತಾಪವೂ ದಾಖಲೆಯೊಳಗಿದೆ.
- ಭಾರತೀಯ ಶಿಕ್ಷಣದ ಕಾಣ್ಕೆಯನ್ನು ಬಿತ್ತರಿಸುವ ರಾಷ್ಟ್ರೀಯ ಶಿಕ್ಷಾ ಆಯೋಗ ಅಥವ ರಾಷ್ಟ್ರೀಯ ಶಿಕ್ಷಣ ಆಯೋಗ ಎಂಬ ಉನ್ನತ ಸಮಿತಿಯ ನೇಮಕ, ಆ ಮೂಲಕ ನಮ್ಮ ಶೈಕ್ಷಣಿಕ ಆಡಳಿತದ ಕಪ್ಪುಚುಕ್ಕೆಯಾಗಿರುವ ಕಳಪೆ ಆಡಳಿತ ಸಮಸ್ಯೆಗೆ ಪರಿಹಾರ ಕಾಣುವ ಪ್ರಯತ್ನವಾಗಬೇಕು ಎಂಬ ಶಿಫಾರಸು ದಾಖಲೆಯಲ್ಲಿದೆ. ಅದರ ಇನ್ನೊಂದು ಮಹತ್ವದ ಗಟ್ಟಿ ಶಿಫಾರಸೆಂದರೆ, ಆಡಳಿತ ಮತ್ತು ನಿಯಂತ್ರಣವನ್ನು ಪ್ರತ್ಯೇಕಿಸಬೇಕು, ಶಾಲಾ ಮತ್ತು ಉನ್ನತ ಶಿಕ್ಷಣದಲ್ಲಿ ಬಹಳವಾಗಿ ಬೇಕಿರುವ ಸ್ವಾಯತ್ತತೆಗೆ ದಾರಿಯಾಗಬೇಕು ಎಂಬುದು.
- ಈ ನಿರೂಪಣೆಯಲ್ಲಿ ಶಿಕ್ಷಣಕ್ಕೆ ನೀಡಲಾಗುವ ಹಣಕಾಸು ಬೆಂಬಲ ಮತ್ತು ವ್ಯಯವನ್ನು 'ಹೂಡಿಕೆ' ಎಂದು ಪರಿಗಣಿಸಬೇಕಲ್ಲದೆ ಖರ್ಚು ಎಂದಲ್ಲ ಎನ್ನಲಾಗಿದೆ. ತುಂಬ ಸಮಯದಿಂದ ಆದ್ಯತೆಗೆ ಬಾರದೆ ಉಳಿದ ವಿಷಯ, ದೇಶದ ಒಟ್ಟು ಆದಾಯದ ಶೇ. 6 ಭಾಗವನ್ನು ಶಿಕ್ಷಣದ ಮೇಲೆ ಖರ್ಚುಮಾಡಬೇಕಾದ ಅಗತ್ಯವನ್ನು ನೀತಿಯಲ್ಲಿ ಮುನ್ನಲೆಗೆ ತರಲಾಗಿದೆ. ಅಂದರೆ, ಶಿಕ್ಷಣದಲ್ಲಿ ಸಾರ್ವಜನಿಕ ಹೂಡಿಕೆಯ ಪ್ರಮಾಣವನ್ನು ಒಟ್ಟು ವ್ಯಯದ ಮೇಲೆ ನಿರ್ಧರಿಸುವುದು ಹೆಚ್ಚು ಪರಿಣಾಮಕಾರಿ (ಮತ್ತು ಇದು ಕಾರ್ಯಸಾಧುವೂ ಹೌದು) ಎಂದು ಹೇಳಲಾಗಿದೆ. ಈ ಮಾಪನವನ್ನು ಬಳಸಿ ಈಗಿನ ಸಾರ್ವಜನಿಕ ಹೂಡಿಕೆ ಪ್ರಮಾಣ ಶೇ. 10ನ್ನು ಶೇ. 20ಕ್ಕೆ ಮುಂದಿನ 10ವರ್ಷಗಳಲ್ಲಿ ಏರಿಸುವ ಕುರಿತು ಶಿಫಾರಸು ಮಾಡಿದೆ.

ಶಾಲೆ ಮತ್ತು ಉನ್ನತ ಶಿಕ್ಷಣ ಎರಡರಲ್ಲು ಕಲಿಕೆಯ ಗುಣಮಟ್ಟ, ಸಮತೆ ಮತ್ತು ಒಳಗೊಳಿಸುವಿಕೆಯನ್ನು ಹೊಂದುವ ಕಾಳಜಿ ದಾಖಲೆಯ ಉದ್ದಕ್ಕೂ ವ್ಯಕ್ತವಾಗಿದೆ. ಇನ್ನೂ ಕರಡು ಸ್ಥಾನಮಾದಲ್ಲಿರುವ ರಾಷ್ಟ್ರೀಯ ಶಿಕ್ಷಣ ನೀತಿ 2019, 1986ರ ನೀತಿ ಪ್ರಕಟವಾದ 30 ವರ್ಷಗಳ ನಂತರ ಹೊರಬರುತ್ತಿದೆ. ಇನ್ನಿತರ ಕ್ಷೇತ್ರಗಳಿಗಿಂತ ಭಿನ್ನವಾಗಿ ಶಿಕ್ಷಣ ಪರಿಣಾಮ ಬೀರುವುದಕ್ಕೆ ಸಮಯ ತೆಗೆದುಕೊಳ್ಳುತ್ತದೆ. ಸ್ವೀಡನ್ ಮತ್ತು ನಾರ್ವೆಯಂತ ದೇಶಗಳು, ತಮ್ಮ ಶಿಕ್ಷಣ ನೀತಿಯ ಜಾರಿಯಲ್ಲಿ ವಿಚಲಿತಗೊಳ್ಳದ ಬದ್ಧತೆಯಿಂದ ಮುಂದುವರಿದು ಮಾದರಿಗಳನ್ನು ಸೃಷ್ಟಿಸಿರುವುದು ಎದುರಿಗಿದೆ. ತನ್ನ ಪಥದಿಂದ ವಿಮುಖವಾಗದೆ ಶಿಕ್ಷಣ ನೀತಿಯನ್ನು ಅನುಷ್ಠಾನಗೊಳಿಸುವ ದೃಢನಿಶ್ಚಯವನ್ನು ಮಾಡುವುದು ಭಾರತ ದೇಶದ್ದೂ ಆಗಬೇಕು.

ಅದಕ್ಕಾಗಿಯೆ 2019ರ ಶಿಕ್ಷಣ ನೀತಿ ಮಹತ್ವದ್ದು. 200ಕ್ಕು ಹೆಚ್ಚಿಗೆ ಶಿಫಾರಸುಗಳಿರುವ ಈ ದಾಖಲೆಯಲ್ಲಿ ಕೆಲವು ವೈರುದ್ಯದ ಸೂಚನೆಗಳಿದ್ದರೆ, ಅನುಷ್ಠಾನ ಯೋಗ್ಯವಲ್ಲದ ಸಲಹೆಗಳಿದ್ದರೆ, ಅತಿಆದರ್ಶ ಅಥವ ಸರಳ ತಾರ್ಕಿಕತೆಗೆ ನಿಲುಕದ ಆಲೋಚನೆಗಳಿದ್ದರೆ ಅದು ಅಸಂಭವವಲ್ಲ. ಸಾಧ್ಯವಿರುವಷ್ಟು ನಾಗರೀಕರು – ಸಾರ್ವಜನಿಕರು, ವಿದ್ಯಾರ್ಥಿಗಳು, ಪೋಷಕರು, ಸಂಬಂಧಿಸಿದ ಕ್ಷೇತ್ರ ಪರಿಣಿತರು, ಅನುಷ್ಠಾನಾಧಿಕಾರಿಗಳು, ನಾಗರೀಕ ಸಮಾಜಗಳು – ತಮ್ಮ ರಚನಾತ್ಮಕ ಹಿಮ್ಮಾಹಿತಿಯನ್ನು, ಪರ್ಯಾಯಗಳನ್ನು ಮತ್ತು ಸಲಹೆ ಸೂಚನೆಗಳನ್ನು ನೀಡುವುದು ಅವಶ್ಯಕವಾಗಿದೆ. ಕರಡು ನೀತಿ ಮಾನವ ಸಂಪನ್ಮೂಲ ಸಚಿವಾಲಯದ ಅಂತರ್ಜಾಲ ತಾಣದಲ್ಲಿ ಲಭ್ಯವಿದೆ.

ಸಮಿತಿಯು ಕರಡು ಪ್ರತಿಯನ್ನು ರೂಪಿಸುವ ತನ್ನ ಕೆಲಸವನ್ನು ಮುಗಿಸಿದೆ. ಸರಕಾರ ಸಾರ್ವಜನಿಕರ ಪರಿಶೀಲನೆಗೆ ಅದನ್ನು ತೆರೆದುಕೊಟ್ಟಿದೆ. ಈಗ ದೇಶದ ಕಾಳಜಿವಂತ ನಾಗರೀಕರಾಗಿ ನಮ್ಮ ರಚನಾತ್ಮಕ ಹಿಮ್ಮಾಹಿತಿಯನ್ನು ನೀಡಿದ್ದಾದರೆ, ದೇಶ ಬದಲಾವಣೆಯ ಮುಂಗಾಮಿ ನೀತಿಯನ್ನು ಪೂರ್ಣಗೊಳಿಸಿ ಜಾರಿಗೆ ಸ್ವೀಕರಿಸಬಹುದು. ಮಾತ್ರವಲ್ಲ ಪ್ರಜಾಧಿಪತ್ಯ ರಾಷ್ಟ್ರವಾಗಿ ರೂಪುಗೊಳ್ಳುವ ಸಂವಿಧಾನವನ್ನು ಪಡೆದು ಕನಸಿದ್ದನ್ನು ಸಾದಿ ಬಹುದು.

****



Nethravathi is drying up!

Peri

In May 2019, the newspapers carried a unique letter by the most popular and reverend Hegde of Dharmasthala. The letter requests the devotees not to come now to have the darshan of the lord of Darmasthala. I was shocked by this letter. More because I am from that district. We have never had such severe drought condition in Dakshina Kannada district, and more than anything Darmasthaala is on the bank of river Nethravathi, which provided everything that we needed. That is why it is believed to be our mother, a sacred river which never dried up. What happened? What went wrong? How has it dried up? And moreover, this place is in the foothills of western Ghat. I was shocked. It has made me to think. With heavy monsoon, and the thickly forested Ghats for the catchment, if this is the situation, what could be the condition of other places? Places like northern Karnataka and cities like Bengaluru. Now, do we have any choices? Environment is a serious issue. It has come to a situation where we have no choice… it is Do or Die. And in literal sense too. It is do or die!

We have destroyed the western Ghats, abused the rivers and all the water bodies and contaminated this land like never before. At this rate of destruction, this earth is not going to keep us for long. We need to check and restore the ecological balance immediately. The work has to happen in all spheres. At all levels. By everyone on this earth. We will have to take care of this earth and nurture it for some time very carefully or else the doom is sure to come! Coming of the doom is clear and soon! This is a global issue. The three global issues on priority are inequity, injustice and lack of care. The lack of care in two areas are the main concern. In human and environment. And this lack of care in human and environment has led to this NO HOPE condition.
The root cause of all of today's problems and the pathetic situation of this world is the lack of care and concern for the fellow human being and the environment in which we live. This feeds in to each other and destroys the both the human being and the world we live in. This lack of care has led us to a situation where a natural and rich place of abundant greenery and water is deprived of it! It has led to a situation wherea call is given for devotees not to visit their place of worship!

If we leave the situation to its fate and think things will improve it will not! There are evidences of many civilizations on river banks self-destroyed because of abuse of the river and the nature. Hence, as conscious and concerned human beings we cannot leave things to its fate. We need to do something, and something very fast. There is a lot of work that we need to do at all levels with all the people. Education has this main aim of preparing a rational and independent and creative human being who works for the betterment of this society and larger world. We need to start this work very strongly and holistically in the domain of Education.

Where do we start? We need to start at all levels and on all fronts. One major area is when the child is very young, and at the primary level. With the children. This start from the primary need to move forward in the education ladder. Hence, sensitizing our young people towards fellow human beings and the nature we live in is very critical. It is most fundamental and very necessary for sustainable living. That is why along with early language and maths, environmental science becomes so important. Some areas the curriculum need to focus for the child are: Observing, appreciating, analyzing, understanding, experiencing and acting! 'What' is simple, the difficulty is in 'how'. How do we provide the space, exposure and experience for the child to build sensitivity towards human beings and the Nature?

Observing: The young children will have to get exposed to the nature, for that the EVS will have to be in the open space, in the immediate nature and not inside the four walls of the classroom. Guided observation is very important, helping the child to see things, see deeper, see the larger space, and see the surrounding. Connecting with what you are seeing. Observing will have to be part of their life.
Appreciating: Observing will slowly lead to enjoying what you have seen, the variety, the colors, the textures, the combinations, the beauty in this nature and its processes. This will help the child love things, see the value and beauty of things and the whole world.

Analyzing: Close observations and appreciation should lead to looking deeper and to questioning. This WHY is a very important phenomenon. For a child who observes providing another perspective, another angle and leading the child to question is a very important step. Helping the child look for answers to the questions that it had raised is the way to move forward.

Understanding: For the child, the observation, appreciation and analysis leads to understanding certain things. Why is this like this? How does this work? What is the connection between this and that? How is this dependent on that? What is the immediate and explicit connection between things? What is the deeper and abstract connections in this nature, the dependency and the interdependency of each and every thing in this nature, the various webs that's found in this earth, the food chain, the water cycle, the seeing of the whole nature including human as ONE!

Acting: This is the core of the entire environment education. Our schools will have to provide space for the child to do something! Do and thus experience in the process of doing. The pedagogy itself should be a process of loving and caring of fellow human beings and the Nature! Looking after and caring the weaker, the sick and the needy people. Caring of the animals, working in the land, growing and looking after the plants, planting saplings and looking after the growing plants. Eating what has been grown by us. All these simple things go a long way in building a strong understanding of the nature and a sensitivity towards this nature. Conserving is a very important element in preserving this nature. Conserving water and food is something that the child will have to develop from very young days. Avoiding waste is another important element. A lot of work, simple work will be against polluting this nature and its resources. Children will have to develop the sensitivity of how not to Exploit the nature and fellow human beings. That is why this cannot be rote learnt. That is why this cannot be learnt by heart or by drill, but acquired by doing. It is slowly imbibed by doing. Doing things together, working in teams, supporting and cooperating and appreciating each other is a very important element in this process.

All these things, if done with care and understanding will definitely develop good human beings who will make a better society and society better! This has no readymade answers and it cannot be done by a fixed syllabus. It is the way of life that we have to develop in children. It is the culture that we have to help children acquire in life. This cannot be done by cascading method. This cannot be done by lecturing or preaching. This is something more and beyond that. This requires teachers who deeply believe in these values and at least lives a part of these values themselves. That is why people feel EVS is more than other subjects. It connects everything and gives meaning to everything and helps us lead a meaningful and fruitful life.